
Azim Premji Foundation

Karnataka Field Institutes

# ಬಯಲು Bayalu

Issue No. 63

November 2017



...a space of our own

Azim Premji Foundation

Karnataka Field Institutes

## ಪರಿವಿಡಿ


1. You don’t repeat stories! ..... 3
2. ಇದು ಕಳೆದ ತಿಂಗಳಿನ ‘ಪುಟ್ಟಮ್ಮನ ಅಜ್ಜನೆ ಮನೆ ಯಾನ’ದ ಮುಂದುವರಿದ ಭಾಗ ..... 5
   ‘ಪುಟ್ಟಮ್ಮನ ಅಜ್ಜನ ಮನೆ ಯಾನ’ ಭಾಗ 2 ..... 5
3. ಸಾರ್! ಸೂಟ್ ಕೇಸ್ ಮೇಲೆ ಹೊಡೀರಿ ..... 7
4. Wish childhood was shorter ..... 10
5. ಗೌರಿ ಹಬ್ಬ- ನನ್ನ ಬಾಲ್ಯಕ್ಕೊಂದು ಅಸ್ಮಿತೆ ..... 11
6. ಒಂದು ದಿನದ ಮೀಸೆಯ ಕಥೆ ..... 13
7. ಸವಿನೆನಪಿನ ನವಿಲುಗರಿ ..... 17
8. ಸಮುದಾಯ ಅಭಿವೃದ್ಧಿ ಮಾದರಿ ..... 19
9. ನನ್ನ ಬಾಲ್ಯ ಮತ್ತೆ ಸಿಗಬಹುದೇ?* ..... 24
10. ಮತ್ತೆ ಬೇಕೆಂದರೂ ಸಿಗದ ರುಚಿ ..... 26
11. “ಬಾಲ್ಯ”ದ ಗೆಳೆತನ– ದಿಲೀಪಕುಮಾರ ರಾಠೋಡ ..... 30
12. ಅದೇನೋ ಬಾಲ್ಯದ ಬಗ್ಗೆ ಬರಿಬೇಕಂತೆ !! ..... 32
13. ಒಂದು ಕಥೆ ..... 33




# You don't repeat stories!

-Peri

So what is it that attracts children to stories? I remember my Ajji telling many stories of fishes. One of it I still remember is a story of Bangude and Boothai (mackerel and sardine). This is a beautifully woven story where the newly wed fish couple come out to see and enjoy the village and a lot of things happen. Different fishes are brought into the story as different characters. I remember my Amma telling the same story to my daughters and to my surprise new characters were included by my mother. I found that my daughters too enjoyed this story and asked Amma to tell this story often. Now, I can say that it was not a very old story since Ajji's story had patel and someknown caste names. When my mother narrated the same story to my daughters, police had appeared in the place of patel. This always made me think. This was an ordinary story, nothing ground breaking appears in this story. What is it that attracts children? Nothing great happens, no twist and turn, no great imagination . . . . It was not boring for me to retell this story to children of my younger friends. To them it was not boring! So what is it that attracts us to stories and telling of the stories?


This thought further enhanced when I was visiting the story telling stalls of Kathavana. As I moved from one stall to the other I found a lot of effort on the part of the story teller to tell the story. They use all sorts of aids. Their body, voice, properties, color, puppets, and what not? My Ajji, then my Amma, and for that matter most of the folk story tellers, do not appear to be struggling to tell the story. It is very easy and unfolds seamlessly without any effort. They hardly use any aids. How is this done? I have no answer except that story is a part of their personality and life. Now, then the question is how can story become part and parcel of you and your life? Difficult one to answer. The way the story is said and unfolded looks like it has not been rote learnt . And it was recalled as and when needed. This looks different. The folk story tellers are very dynamic and the process of storytelling is very organic. So today it might be different than yesterday. Today there might be a different twist, a different turn, and new characters are introduced. Some characters are edited. By and large the frame will be the same. Hence, each day it is a different story! Each time it is a new story, and created by the story teller based on the mood of the teller and the listener and the whole context. They do not repeat stories. They tell stories and each time it is original. And each time it is different.

The other thing that I found in Kathavana, was that the story tellers here were not satisfied till they made meaning for the children. It could be anythi, things like driving home the value or repeating the learning, or it could be any other thing. The story tellers are not satisfied till the children repeat! And I see children hating repetition. They hate the most when they are made to repeat or worst is when the story teller repeats many times for the child to understand. This is horrible since child has understood the moment you have uttered the sentence. If it was not understood, any amount of repetition would not help the child to understand. Something else might help, but not repetition. It makes the situation boring and miserable. For that matter, if you say that a large tree fell . . . ***DHUDUM!*** The child can imagine that, you don't need to show a small illustration of a tree falling. You leave the child to imagine and the child will imagine! The small cut out picture limits the child's imagination. Hence the aid that we use becomes a distraction for the child! We do that thinking that this aids the child's imagination not knowing that it curtails imagination of the child. Krishna kumar has written about this and there are plenty of studies around the world on this. Folk story telling has never focussed on values or forced meaning making. Some

of the folk story telling is in the community where everyone will not understand 100% of the story. But, folk forms have scope for this. They seem to be hinting that you understand as much as you can. You will understand it later when you can. And the story is in the air for you to pick up.

I was under the impression that story telling with aids was better than plain storytelling till I did an experiment of storytelling with puppets in 1985. I had 2 stories with a lot of puppets and I went on a Jatha to primary schools performing the story telling. 3 to 4 shows per day for four and a half months. After the story telling I used to talk to children. I did different things in these four and a half months. Using lots of puppets, using less puppets, storytelling with no puppets, and plain story telling. I found children fascinated even when it was plain storytelling. This has really made me think. I was disturbed by this observation and struggling for an answer. I had no specific views on this till I read Krishna kumar and other studies and later during Rohit Dhanker's workshop on Foundations of Education course. There I found similar experiences which helped me to understand this phenomenon. Performance you can do if you want, aids too you can use, but if you wish to help the child to imagine and think, then probably plain story telling is better than anything else.

I feel our Ajji, our Amma and the folk story tellers, have found this truth of storytelling with trial and error process. Just story telling without mixing Values or not coating the 'do's and don'ts' with sugar has been their approach and that is what makes stories listenable and interesting. The studies too say that it is the element of sincerity and simplicity that ultimately wins. Can we just say stories to our children, interesting stories, good stories which help them imagine, which help them build their own stories, and then are we ready to listen? Any story teller will tell you that story telling needs an audience, a listener! With nobody to listen to you cannot tell a story! Can we at least become good and active listeners to our children? So that they can create stories to tell, so that they start thinking, so that they create their own stories . . .



## ಇದು ಕಳೆದ ತಿಂಗಳಿನ 'ಪುಟ್ಟಮ್ಮನ ಅಜ್ಜನ ಮನೆ ಯಾನ'ದ ಮುಂದುವರಿದ ಭಾಗ

## 'ಪುಟ್ಟಮ್ಮನ ಅಜ್ಜನ ಮನೆ ಯಾನ' ಭಾಗ 2

– ರಾಮಕೃಷ್ಣ

ಆಗೊಮ್ಮೆ ಅವಳು ತಾನು ಕೂತ ಸೀಟಿನ ಪಕ್ಕ ಕಿಟಕಿ ಸೈಡಿಗೆ ಕೂತವರ ಮುಖ ನೋಡಿದಳು. ಅವರು ಅವಳನ್ನೆ ಬಹಳ ಹೊತ್ತಿನಿಂದ ಕಣ್ಣಿಟ್ಟು ನೋಡುತ್ತಿದ್ದ ಹಾಗಿತ್ತು. ಅವಳ ಕಣ್ಣು ಅವರದನ್ನು ಸಂಧಿಸುವ ಬಹಳ ಮೊದಲಿಂದಲೆ ಅವಳನ್ನೆ ಅವರು ಅಕ್ಕರೆಯಿಂದ ನೋಡುತ್ತಿದ್ದ ಹಾಗಿತ್ತು. ಆತ ಪರಿಚಿತನಲ್ಲ. ಆತನ ಕಪ್ಪುಕರಿ ಗಡ್ಡ ಯಾರೀತ ಹೊಸ ಮನುಷ್ಯ ಅನಿಸುವಂತೆ ಮಾಡಿತು. ಆತ, **'ಕಿಟಕಿ ಪಕ್ಕ ಕೂರ್ತಿಯಾ?'** ಎಂದು ಆತ್ಮೀಯವೆನಿಸುವಂತೆ ಕೇಳಿದ. ಬಾಯಿಬಿಡದೆ ಇಲ್ಲ ಎಂದು ತಲೆ ಮಾತ್ರ ಅಲ್ಲಾಡಿಸಿ ಹೇಳಿದಳು. ಅವಳಿಗೆ ಕಿಟಕಿ ಪಕ್ಕ ಜರುಗಿ ಅಮ್ಮನಿಂದ ದೂರವಾಗುವುದಕ್ಕೆ ಮನಸ್ಸಾಗಲಿಲ್ಲ. ಅಲ್ಲಿ ಹೋದರೆ ತಾನು ಬೇಕಾದಂತೆ ಅಮ್ಮನ ಬಳಿ ಹೋಗಲಾರೆ ಅನಿಸಿತು. ಆ ಗುರುತಿಲ್ಲದ ಮನುಷ್ಯ ತೋರಿದ ಅಕ್ಕರೆಗಿಂತ ಅವನ ಗಡ್ಡ ಮತ್ತು ಮುಖ ಚಹರೆಯ ಅಪರಿಚಿತತೆ ಅವನ ಕೊಡುಗೆಯನ್ನು ತಿರಸ್ಕರಿಸುವಂತೆ ಮಾಡಿತ್ತು. ಕಿಟಕಿ ಪಕ್ಕ ಕೂತು ಹೊರಗೆ ಕಾಣೋದೆಲ್ಲವನ್ನು ನೋಡುವುದು ಅವಳಿಗೆ ಬೇಕಿತ್ತು. ಆದರೆ ಅಮ್ಮನಿಗೆ ಹತ್ತಿರವಾಗಿರುವುದೆ ಮೇಲು ಅನಿಸಿತು ಅವಳಿಗೆ. ಯಾವಾಗಲು ಗೊಂದಲಿಸದೆ ತೀರ್ಮಾನಿಸಿಕೊಳ್ಳುವುದು ಪುಟ್ಟಮ್ಮನಿಗೆ ಅವಳ ಅಮ್ಮನಿಂದ ರಕ್ತದಲ್ಲೆ ಇಳಿದು ಬಂದಿತ್ತು. ತೀರ ಬೇಸರವಾದಾಗಲು ಫಕ್ಕನೆ ಖುಷಿಗೆ ಹೊರಳಿಕೊಳ್ಳುವುದು ಅವಳಿಗೆ ಆಗುತ್ತಿತು.

ಈಗವಳು ಅವನೆಡೆ ತಿರುಗದೆ ಒಂದೆ ಸಮ ಗಡ್ಡದ ಮನುಷ್ಯನನ್ನೆ ಯೋಚಿಸಿಕೊಂಡಳು. ಆ ಗಡ್ಡ ಅವಳಿಗೆ ಅಪರಿಚಿತವಾಗಿ ಇದ್ದರೂ ಆಕರ್ಷಣೀಯವಾಗಿತ್ತು. ಅದು ಭೂಮಿಯ ಕಡೆಗೆ ಇಳಿಯುವಂತೆ ಕತ್ತರಿಸಿಕೊಂಡ ಗಡ್ಡವಾಗಿತ್ತು. ಅದು ಕೆನ್ನೆ ತುಂಬ ಪೊದೆಯಾಗಿ ಬೆರಳೂ ಆಡಿಸಲಾಗದಂತೆ ದಟ್ಟವಾಗಿತ್ತು. ಅದರ ಮೇಲೆ ತಿರುಪಿ ಕೂರಿಸಿಕೊಂಡ ಮೀಸೆಯಿತ್ತು. ನಕ್ಕಾಗ ಕಣ್ಣು ಕಿರಿದಾಗಿ ಆತ ಸಂಕೋಚದವನಂತೆಯೂ ಇದ್ದ. ಆ ಸಂಕೋಚದ ನಗುವನ್ನು ನೋಡುವುದಕ್ಕೆ ಅವಳಿಗೆ ನಾಚಿಕೆಯ ಹಾಗೂ ಆಗುತ್ತಿತ್ತು. ಅದೆಲ್ಲ ಅವಳ ಮನಸ್ಸಿಗೆ ಸ್ಪಷ್ಟವಾಗಿ ಬರದಿದ್ದರು, ಮಾತಿಗೆ ಸಿಗದೆಯೂ ಅವಳಿಗೆ ವೇದ್ಯವಾಗುತ್ತಿತ್ತು. ಅವನನ್ನು ಮತ್ತೆ ನೋಡಬೇಕಿನಿಸಿದರೂ ಅವಳು ನೋಡಲಿಲ್ಲ.

ಈಗವಳು ಏನಾದರು ಒಂದು ಮಾಡಬೇಕಿತ್ತು. ಗಡ್ಡದ ಮನುಷ್ಯನ ಬಗೆಗೆ ಯೋಚಿಸುವುದರಿಂದ ಅವಳು ತಪ್ಪಿಸಿಕೊಳ್ಳಬೇಕಿತ್ತು. ಪ್ರಾಕಿನ ಮುಂದೆ ಅವಳ ಹೊಕ್ಕುಳ ಮೇಲೆ ಒಂದು ಬಟ್ಟೆಯ ಹೂ ಬಣ್ಣಬಣ್ಣವಾಗಿತ್ತು. ಅದನ್ನು ನೋಡಿದಳು. ಕೈಯಿಂದ ಸವರಿದಳು. ಮತ್ತೆ ಅದನ್ನ ತಿರುಚುತ್ತ ಕೂತಳು. ಹಾಗೆ ತಿರುಚುತ್ತಿರುವಾಗ ಅದು ಕಿತ್ತು ಬಂತು. ಆ ಚಂದದ ಹೂ ಕಿತ್ತುಬಂದಾಗ ಅವಳಿಗೆ ಕಸಿವಿಸಿಯಾಗಿ ಮೆಲ್ಲಗೆ ಸೀಟಿನ ಕೆಳಗೆ ಜಾರಿಕೊಂಡವಳೆ ಅಮ್ಮನ ಬಳಿ ಸಾಗಿದಳು.


ಅಮ್ಮನ ತುಟಿಯಂಚಿನಲ್ಲಿ ಜೇನಿನ ಹಾಗೆ ಜಿನುಗುವ ವಿಶ್ವಾಸ ಮತ್ತು ಪ್ರೀತಿಯನ್ನು ಕಂಡ ಅವಳಿಗೆ ಅಮ್ಮನ ಬಾಯಿಗೆ ತನ್ನ ಬೆರಳುಗಳನ್ನು ಹಾಕುವ ಹಾಗಾಯಿತು. ಹಾಗೆ ಮಾಡದೆ ಅಮ್ಮನ ತುಟಿಗಳನ್ನು ಸವರಿದಳು. ಅಮ್ಮನಿಗೆ ಕಿಲಿಕಿಲಿಯಾಗಿ ತುಟಿಬಿರಿಸಿ ನಕ್ಕಾಗ ಅಮ್ಮನ ಕೈಗೆ ಕಿತ್ತುಹೋದ ಬಟ್ಟೆಯ ಹೂವನ್ನಿತ್ತು, ಅಮ್ಮ ಅದನ್ನು ತನ್ನ ಕೈಚೀಲದೊಳಗೆ ತುರುಕುವುದನ್ನು ನೋಡಿ, ಅವರು ನಿರುಮ್ಮಳವಾಗಿ, **'ಅಜ್ಜನ ಮನೆಯಲ್ಲಿ ಅದನ್ನು ಮತ್ತೆ ಹೊಲಿದು ಬಟ್ಟೆಗೆ ಕೂರಿಸೋಣ'** ಎಂದುದನ್ನು ಕೇಳಿ, ಅಮ್ಮನ ಕೈಯ ಬೆರಳುಗಳಲ್ಲಿ ತನ್ನ ಬೆರಳುಗಳನ್ನು ಆಡಿಸಿದಳು. ಅಮ್ಮ ಬಟ್ಟೆಯ ಹೂಕಿತ್ತ ಅವಳ ಬೆರಳುಗಳನ್ನು ಬಾಗಿ ಮುದ್ದಿಸಿದರು.

ಪುಟ್ಟಮ್ಮ ಮತ್ತೆ ತನ್ನ ಸೀಟಿಗೆ ವಾಪಾಸುಬಂದಳು.

ಸೀಟಿನ ಮೇಲಕ್ಕೆ ತನ್ನನ್ನು ತಳ್ಳಿಕೊಳ್ಳುವುದು ಈಗವಳಿಗೆ ಸಲೀಸು ಅನಿಸಿತು. ಈ ಮುಂಚೆ ಮಾಡಿದ ಎಲ್ಲವನ್ನು – ತನ್ನ ಕುಂಡೆಯನ್ನು ಎತ್ತರಿಸಿ ಸೀಟಿಗೆ ಹತ್ತಿಸಿಕೊಂಡು, ಮುಂದಿನ ಸೀಟಿನ ಬೆನ್ನಿಗೆ ಕೈಯಿರಿಸಿ ತನ್ನನ್ನು ತಳ್ಳಿಸಿಕೊಂಡು, ಆಮೇಲೆ ಹಾವಿನ ಹಾಗೆ ಸೀಟಿನ ಹಿಂದಕ್ಕೆ ಜಾರಿಕೊಂಡು . . . ಹಾಗೆ ಜಾರಿಕೊಳ್ಳುವಾಗ ಆ ಕಡೆ ತಿರುಗಿಕೊಂಡವಳ ಕಣ್ಣುಗಳು ಮತ್ತೆ ಗಡ್ಡದ ಮನುಷ್ಯನ ಕಣ್ಣುಗಳನ್ನು ಸಂಧಿಸಿದವು. ಅವನು ಕಣ್ಣುಗಳನ್ನು ಕಿರಿದುಮಾಡಿ ನಸುನಕ್ಕ. ಆದರೆ ಆ ಕಡುಕಪ್ಪಿನ ಪೊದೆ ಗಡ್ಡದ ಕಾರಣಕ್ಕೆ ಅವನಿಗೆ ಕಣ್ಣುಕೊಟ್ಟು ನೋಡುವುದಕ್ಕೆ ಅವಳಿಗೆ ಸಾಧ್ಯವಾಗಲಿಲ್ಲ. ನಗುವುದಕ್ಕು ಆಗಲಿಲ್ಲ. ನಿರ್ಭಾವದಲ್ಲಿ ಬಿಮ್ಮನೆ ಉಳಿದಳು. ಗಡ್ಡದ ಮನುಷ್ಯನು ಅವಳ ಮನಸ್ಸಿನ ಕಷ್ಟಗಳೆಲ್ಲ ತನಗೆ ತಿಳಿಯುವುದೆಂಬಂತೆ ತನ್ನ ಪಾಡಿಗೆ ತಾನಿದ್ದ. ಅವಳು ಸೀಟಿನಲ್ಲಿ ಗಟ್ಟಿಯಾಗಿ ಕೂರುವುದಕ್ಕೆ ಪಾಡುಪಡುವಾಗ ಅವಳನ್ನು ಹಿಡಿದು ತನಗೆ ಒರಗಿಸಿಕೊಳ್ಳಬೇಕೆನಿಸಿದರು ಹಾಗೆ ಮಾಡದೆ ಇದ್ದ. ಅವಳನ್ನು ಅಕ್ಕರೆಯಿಂದ ಪರಿಭಾವಿಸಿಕೊಳ್ಳುತ್ತ ಇದ್ದ.

ಆಗೊಮ್ಮೆ ಮುಂಜಾವಿನ ಎಳೆ ಬಿಸಿಲು ಕಿಟಕಿಯೊಳಗೆ ತೂರಿ ಗಡ್ಡದ ಮನುಷ್ಯನ ಗಡ್ಡವನ್ನು ಸವರಿ ಗಾಳಿಗೆ ಹಾರಿಕೊಳ್ಳುತ್ತಿದ್ದ ಪುಟ್ಟಮ್ಮನ ತಲೆ ಕೂದಲನ್ನು ತಲಪಿತು. ಅವಳ ತಲೆ ಕೂದಲಿನ ಕೆಂಚು ಎಳೆ ಬಿಸಿಲಲ್ಲಿ ಮಿರಿಮಿರಿ ನೆನೆದು ಸೊಗಯಿಸಿತು. ಗಡ್ಡದ ಮನುಷ್ಯನ ಮನಸ್ಸು ಹೇಳುವುದಕ್ಕಿಲ್ಲದಷ್ಟು ಪ್ರಸನ್ನವಾಯಿತು.

ಅವಳ ತಲೆಕೂದಲು ಮೊದಲು ಕಾಣುವಾಗ ಕಪ್ಪಗೆ ಇದ್ದರು, ಅದರ ಮೇಲೆ ಓರೆಯಾಗಿ ಬೆಳಕು ಬಿದ್ದಾಗ ಮುತ್ತುಗನ ಹೂವಿನಂತೆ ಹೊಳೆಯುತ್ತಿತ್ತು. ಅವಳಜ್ಜಿ ಅದನ್ನು ಕಪ್ಪುಮಾಡುತ್ತೇನೆಂದು ಗರುಗನ ಎಣ್ಣೆ ಹಾಕಿ ತೀಡಿದರು ಅದು ಕಪ್ಪಾಗದೆ ಹೊಳೆಯುವುದನ್ನು ಮಾಡುತ್ತಲೆ ಇತ್ತು. 'ಅದು ಹೊಳೆಯಲಿ ಅಜ್ಜಿ' ಎಂದು ಅವಳೆ ಹೇಳುವುದು ಇತ್ತು. ಯಾಕೆಂದರೆ ಅವಳಜ್ಜಿಯೆ ಅದನ್ನು ಕಪ್ಪುಮಾಡುವುದಕ್ಕೆ ಹೊರಡುವ ಮೊದಲು, ಎಷ್ಟು ಚಂದವಾಗಿ ನಿನ್ನ ಕೂದಲು ಕೆಂಚಾಗಿದೆ ಎನ್ನುತ್ತಿದ್ದರು. ಕೊನೆಗೆ ಅಜ್ಜಿ ಗರುಗನ ಎಣ್ಣೆ ಹಾಕುವಾಗ ನೀನಿನ್ನೂ ಸ್ವಲ್ಪ ದೊಡ್ಡವಳಾದ ಮೇಲೆಯೆ ಅದು ಕಪ್ಪಾಗವುದು ಎಂದು ಸಮಾಧಾನಿಸಿಕೊಂಡಿದ್ದರು. ಅವಳ ಮನಸ್ಸಿನಲ್ಲಿ ದೊಡ್ಡವಳಾಗುತ್ತ ತಾನು ಏನೆಲ್ಲ ಆಗುವುದಕ್ಕಿದೆ ಎಂಬ ಹಂಬಲ ಮೊಳೆಯವುದರಲ್ಲಿ ಅವಳಜ್ಜಿಯ ಮಾತುಗಳೂ ಇದ್ದವು. ಏನೇನೆಲ್ಲ ತಾನು ಆಗುವುದನ್ನು ಸತತ ಎದುರು ನೋಡುವುದು ಅವಳಲ್ಲಿ ಪ್ರಾರಂಭವಾಗಿತ್ತು.



ಸೀಟಿನಲ್ಲಿ ಕಾಲುಗಳನ್ನು ಮುಂಚಾಚಿ ಕೂತ ಪುಟ್ಟಮ್ಮನಿಗೆ ತನ್ನ ಚಪ್ಪಲಿಗಳು ಸಡಿಲವಾಗಿರುವುದು ಗಮನಕ್ಕೆ ಬಂತು. ಮುಂದಿನ ಸೀಟಿಗೆ ಕಾಲೊತ್ತಿ ಅಂಗಾಲುಗಳನ್ನು ಹೊರಳಿಸಿ ಸರಿಪಡಿಸಿಕೊಳ್ಳಲು ನೋಡಿದಳು. ಆಗದೆಹೋಯಿತು. ಒಂದು ಕಾಲಿನ ಚಪ್ಪಲಿ ಜಾರಿ ಕೆಳಗೆ ಬಿತ್ತು. ಬಗ್ಗಿ ನೋಡಿದವಳಿಗೆ, ಇನ್ನೊಂದು ಕಾಲಿನ ಚಪ್ಪಲಿಯೂ ಸಡಿಲವಾಗುತ್ತಿದೆ ಅನಿಸಿತು. ತಾನು ಸೀಟಿಂದ ಇಳಿಯುವುದೆ, ಹೇಗೆ ಎಂದು ಒಂದು ಕ್ಷಣ ಹೊಯ್ದಾಡಿದಾಗ ಅವಳಿಗೆ ಗೊತ್ತಿಲ್ಲದಂತೆ ಮುಖ ಹೊರಳಿ ಗಡ್ಡದ ಮನುಷ್ಯನ ಕಡೆಗೆ ನೋಡಿತು. ಆತ ಕೆಳಗೆ ಬಿದ್ದ ಆ ಚಪ್ಪಲಿಯನ್ನು ಯಾವುದೆ ಭಾವವಿಲ್ಲದೆ, ಅವಳಿಗಾಗಿ ತಾನೇನೂ ಮಾಡುತ್ತಿಲ್ಲ ಎಂಬಂತೆ, ಹಾಗೆ ಎತ್ತಿಕೊಡುವುದು ಸಹಜ ಎಂಬಂತೆ, ಎತ್ತಿ ಅವಳಿಗೆ ಕೊಟ್ಟ. ಅವಳು ಆತನ ಮುಖ ನೋಡದೆ ಅವುಗಳನ್ನು ಕೈಗೆ ತೆಗೆದುಕೊಂಡಳು. ಈಗ ಮತ್ತೆ ಅವಳಿಗೆ ಸಂಕೋಚವೆನಿಸಿ, ಕೈಗೆ ತೆಗೆದುಕೊಂಡ ಚಪ್ಪಲಿಯನ್ನು ಹೊರಳಿಸಿ ನೋಡುವುದನ್ನು ಮಾಡಿದಳು. ಅದರ ತಳ ಭಾಗದಲ್ಲಿ ಬಸ್ಸು ಏರುವುದಕ್ಕೆ ಮೊದಲು ತುಳಿದಿದ್ದ ಹಸುವಿನ ಹಸಿ ಸಗಣಿ ಇನ್ನೂ ಸ್ವಲ್ಪ ಇತ್ತು. (ಮುಂದುವರೆಯುವುದು . . . .)

# ಸಾರ್! ಸೂಟ್ ಕೇಸ್ ಮೇಲೆ ಹೊಡೀರಿ

- ಯತಿರಾಜ ಶರ್ಮಾ

ಮತ್ತೆ ಮತ್ತೆ ಅದ್ನೇ ಹೇಳ್ತಾನೆ ಅಂದ್ಕೊಂಡ್ರೇನೋ! ಆದ್ರೆ ಬೇರೆ ಕಥೆ ಇದು. ಇನ್ನೊಂದು ಕ್ಲಾಸ್. ಇನ್ನೊಂದು ಮಕ್ಕಳ ಗುಂಪು. ಮತ್ತೊಂದು ಕಥೆ. ನರಸಿಂಹ ತಂಟೆಕೋರ ಅನ್ನಿಸ್ಬೋದು. ನಾನೊಬ್ಬ ಟೀಚರ್ ಅಂತ ಹೇಳಿಕೊಳ್ದೆ ಸ್ವಲ್ಪ ಸಲುಗೆ ಕೊಟ್ರೆ ಅವ್ನು ಅವನ ಸ್ನೇಹಿತರೀರ್ವರು ಸೇರಿ ನನ್ಮುಂದೆಯೇ ಬೇಕಂತಲೇ ಡ್ಯಾನ್ಸ್ ಮಾಡೋದು, ವಕ್ರ ವಕ್ರವಾಗಿ ನಿಲ್ಲೋದು, ಕೈ ಸೊಟ್ಟಗಾಗಿಸಿ ಸೆಲ್ಯೂಟ್ ಮಾಡೋದು, ಮುಖ, ಬಾಯಿ ವಕ್ರವಾಗಿ ತಿರುಚೋದು, ಹೀಗೆ ಏನೇನೋ ತರಲೆ-ತಂಟೆ ಅನ್ನಿಸೋ ಕೆಲಸ ಮಾಡ್ತಾರೆ. ಅರ್ರೇ! ಇದೇನಿದು. ಸ್ವಲ್ಪವಾದ್ರೂ ಗೌರವ ಇಲ್ವೇ ನನ ಮೇಲೆ. ನನ್ನನ್ನ ಅಷ್ಟು ಕೀಳಾಗಿ, ಚೀಪಾಗಿ ಕಾಣ್ತಾರ್ಯೇ ಕಳ್ಳ ನನ್ನ ಮಕ್ಳು ಅಂತ ಮನ್ಸಿಗೆ ಅನ್ಸಿದ್ರೆ ಅದೇನು ಅಸಹಜ ಅಲ್ಲ. ಏಕೆಂದ್ರೆ ಅವೆಲ್ಲಾ ಅಗೌರವದ ಸೂಚೆಗಳಲ್ವೇ? ಅದೇನೊ ನಿಜ. ಆದ್ರೆ ಅವ್ರೇಕೆ ಹಾಗೆ ವರ್ತಿಸೋದು? ಅದ್ರ ಹಿಂದೆ ಇರೋ ಕಾರಣ ಆದ್ರೂ ಏನು? ಅವ್ರು ಎಲ್ಲರ ಗಮನ ಸೆಳೀಲಿಕ್ಕೆ ಹಾಗೆ ಮಾಡ್ತಿದಾರ್ಯೇ? ಅಥವಾ ನನ್ನನ್ನ ನಗಿಸ್ಲಿಕ್ಕೆ ಹಾಗೆ ಮಾಡ್ತಿದಾರ್ಯೇ? ಇವೇನಾದ್ರೂ ಕಾರಣಗಳಾದ್ರೆ, ನನಗೆ ಅಗೌರವ ತೋರಿಸೋದು ಅವರ ಮುಖ್ಯ ಉದ್ದೇಶ ಆಗಿರ್ಲಿಕ್ಕಿಲ್ಲ. ಅಥವಾ ನನ್ನನ್ನ ನೋಯ್ಸೋದೇ ಆ ಮಕ್ಕಳ ಉದ್ದೇಶವೇನಾದ್ರು ಆಗಿರತ್ತ? ಗೊತ್ತಿಲ್ಲಪ್ಪ. ಶಿಕ್ಷಣದ ಕುರಿತಾಗಿ, ಮಕ್ಕಳ ಕುರಿತಾಗಿ ನನ್ನ ಆಲೋಚನೆಗಳೆಲ್ಲಾ ಬದಲಾಗಿದ್ರಿಂದ ನನ್ನಲ್ಲೊಂದು ಸ್ಥೈರಣೆ ಬೆಳೆದಿದೆ ಅಂತ ನಾನು ಹೇಳಬೋದಾದ್ರೂ ಹೋದಲ್ಲೆಲ್ಲಾ ಕೇವಲ ಒಂದು ಗಂಟೆಯಷ್ಟೇ ಪಾಠ ಮಾಡೋದ್ರಿಂದಷ್ಟೇ ನನ್ನಲ್ಲಿ ಆ ಸ್ಥೈರಣೆ ಹಾಗೇ ಉಳ್ಕೊಂಡಿರಬೋದೇನೋ.

ಇದನ್ನ ಬರೀಬೇಕಿತ್ತಾ ಅನ್ನೋ ಪ್ರಶ್ನೆ ನನ್ನನ್ನೂ ಕಾಡಿದ್ದಿದೆ. ಆದ್ರೆ ನೈಜ ಕಥೆಗಳ, ನಿದರ್ಶನಗಳ ಅವಶ್ಯಕತೆಯ ಅರಿವಾಗಿದ್ದು ನಾನು ಅವುಗಳಿಗೆ ಹುಡುಕಲಿಕ್ಕೆ ಶುರು ಮಾಡಿದಾಗ. ಅದ್ಯಾವಾಗ್ಲೋ ನಾನು ತರಗತಿಯಲ್ಲಾಗೋ ಕೆಲವು ಕಲಿಕಾ ಪ್ರಕ್ರಿಯೆಗಳಿಗಾಗಿ, ಅಥವಾ ಹೊಸ ಪ್ರಯತ್ನಗಳ ಯಶಸ್ಸಿನ ಪ್ರಮಾಣದ ಕುರಿತಾಗಿ ನೈಜ ನಿದರ್ಶನಗಳನ್ನ ಹುಡುಕ್ಲಿಕ್ಕೆ ಶುರು ಮಾಡಿದಾಗ ಸಿಕ್ಕಿದ್ದೇನೂ ಇಲ್ಲ. ನಮ್ಮಲ್ಲಿ ಆ ರೀತಿಯ ದಾಖಲೆಗಳು ಬರೋದು ಅಪರೂಪವೇನೋ. ಛೇ! ಯಾರೊಬ್ರೂ ಮಾಡೋವ್ರೇ ಇಲ್ವಲ್ಲ ಅಂತ ಬೈದ್ಕೊಂಡಾಗ ನನಗೆ ನಾನೇ ಒಬ್ಬರಿಗೆ ಬುದ್ಧಿ ಹೇಳಿದ್ದು ನೆನಪಾಯ್ತು. ಯಾಕೆ ನಾವು ಯಾವಾಗ್ಲೂ ಯಾರಾದ್ರೂ ಒಬ್ಬರು ಮಾಡಿಕೊಡ್ಲಿ ಅಂತ ಕಾಯ್ತಿರ್ತೇವೆ ಅಂತ ನಾನೇ ಇನ್ನೊಬ್ಬರಿಗೆ ಹೇಳಿದ್ದು ನೆನಪಾಯ್ತು. ನಾನು ತರಗತಿಯೊಳಗೆ ನಾ ಹೇಳೋ ತತ್ವಗಳನ್ನಿಟ್ಟುಕೊಂಡೇ ಕಳೆಯೋ ಸಮಯವನ್ನ ದಾಖಲಿಸಿದ್ರೆ ನನ್ನ ತತ್ವಗಳ, ನಂಬಿಕೆಗಳ ಪರಿಣಾಮಕಾರಿಯತೆ ತಿಳಿಯಬೋದು. ಇದು ಒಂದು ದಿನದ ಪ್ರಯೋಗವಲ್ಲ. ಈ ಪ್ರಯೋಗದ ಪಥದಲ್ಲಿ ಸಿಗುವ ಕೆಲವೊಂದು ಸನ್ನಿವೇಶಗಳ ದಾಖಲೆ ಅನಿವಾರ್ಯವೇನೋ ಅನ್ನೋ ಭಾವನೆ ಮೂಡಿದ್ದಾಗಷ್ಟೇ ಈ ಲೇಖನ ಬರೆಯೋ ಆಸಕ್ತಿ ಹುಟ್ಟಿತು. ನೈಜ ನಿದರ್ಶನಗಳ ಅವಶ್ಯಕತೆ ಇನ್ನೊಂದು ಕಾರಣಕ್ಕೆ ಮುಖ್ಯ. ಅವಿಲ್ಲದೆಯೇ ಎಷ್ಟೊಂದು ತತ್ವಗಳು ಕೇವಲ ಡೆಡ್ ಭಾಷಣಗಳ ವಸ್ತುಗಳಾಗಿ, ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಬದುಕಿರುವ ಮನಸ್ಸನ್ನು ಸೇರದೆ, ಕಪಾಟೆಂಬ ಮಾರ್ಚುರಿಯನ್ನ ಸೇರ್ತವೆ.

ಕಥೆ ಹೇಳ್ತೇನೆ ಅಂದ ತಕ್ಷಣ ಮಕ್ಕಳು ಸುಮ್ಮನಾಗ್ತಾರೆ ಒಳ್ಳೆ ಕಥೆ ಹೇಳ್ತೇವೆ ಅನ್ನೋ ನಂಬಿಕೆಯಲ್ಲಿ. ಮಕ್ಕಳು ಯಾವುದೇ ಅನವಶ್ಯಕ ಅಡಚಣೆ ಮಾಡದೆ ಕಥೆ ಕೇಳೋ ಹಾಗಿದ್ರೆ ಹೇಳಿದ ಕಥೆ ಕೆಲವರಿಗಾದ್ರು ತಲ್ಪತ್ತೆ ಅಲ್ಲವೇ. ಹಾಗಾಗ್ಲಿಕ್ಕೆ ತರಗತಿ ಹೇಗಿರಬೇಕು ಅನ್ನೋದನ್ನ ಅವರಿಂದಲೇ ಕೇಳಿಕೊಳ್ಳುತ್ತ ಬೋರ್ಡ್ ಮೇಲೆ ಬರೆದೆ. ಇವುಗಳಿಗೆ ಎಲ್ಲರದ್ದೂ ಒಪ್ಪಿಗೆಯಿತ್ತು - ಗಲಾಟೆ ಮಾಡಕೂಡದು, ಸುಮ್ಮನೆ ಹಿಂದಿನವರಿಗೆ ಅಡ್ಡ ಬರುವ ಹಾಗೆ ನಿಂತುಕೊಳ್ಳಕೂಡದು, ಕೇಳಿದ ಪ್ರಶ್ನೆಗೆ ಉತ್ತರ ಗೊತ್ತಿದ್ರೆ ಬಡ ಬಡ ಕಿರುಚಬಾರ್ದು - ಕೈ ಎತ್ತಬೇಕು, ಕಿತ್ತಾಟ ಮಾಡಕೂಡದು, ಹೀಗೆ ಒಂದಷ್ಟು ಪಟ್ಟಿ ಮಾಡಿದರು. ಇವುಗಳಲ್ಯಾವುದಾದರೂ ಒಂದನ್ನ

ಮುರಿದ್ರೆ ಏನ್ ಮಾಡೋದು ಅಂತ ಕೇಳಿದಾಗ ನರಸಿಂಹ ಹೇಳಿದ - 'ಸಾರ್.. ಸೂಟ್ ಕೇಸ್ ಮೇಲೆ ಜೋರಾಗಿ ಹೊಡೀರಿ ಸರ್'. ಇದಕ್ಕೆ ಎಲ್ಲರೂ ಸಹಮತ ವ್ಯಕ್ತಪಡಿಸಿಬಿಟ್ರು. ಸರಿ, ನಾ ಕೇಳಿದೆ -'ಸೂಟ್ ಕೇಸ್ ಮೇಲೆ ಜೋರಾಗಿ ಹೊಡಿಬೇಕಲ್ವ. ಜೋರು ಅಂದ್ರೆ ಎಷ್ಟು ಜೋರು ಹೊಡಿಯೋದು? ಎಷ್ಟು ಏಟು ಹೊಡಿಯೋದು?' 'ಈ ಬಿಲ್ಡಿಂಗ್ ಸೂರೇ ಕಳಚಿ ಹೋಗೋ ಅಷ್ಟು ಜೋರಾಗಿ ಹೊಡೀರೀ ಸರ್'', ರೇವತಿ ಹೇಳಿದ್ಲು. 'ಬ್ಯಾಡ ಸರ್. ಅದೆಲ್ಲಾ ಆಗೋಲ್ಲಾ. ಜೋರಾಗಿ ಅಳೋವರೆಗೂ ಹೊಡೀತಾ ಇರಿ ಸರ್', ಅಂತ ರೇವತಿಯದ್ದಕ್ಕೆ ನರಸಿಂಹ ತನ್ನ ಅಸಮ್ಮತಿಯನ್ನು ವ್ಯಕ್ತ ಪಡಿಸಿದ. ಎಲ್ಲರೂ 'ಹೌದು ಹೌದು', ಎಂದ್ರು. 'ಅಲ್ವಾ.. ಇದೆಲ್ಲಾ ನೀವೆ ಹೇಳ್ತಿರೋದು ಅಲ್ವಾ! ಯಾವುದು ನಂದಲ್ಲ' ಅಂತ ಅವರ ಸಮ್ಮತಿಯನ್ನ ಪಡ್ಕೊಳ್ತಾ ಕಥೆಗೆ ಇಳಿದೆ. ಅದಾಗ್ಲೆ ಒಂದು ನಾಲ್ಕೈದು ಜನ ಕಥೆ ಹೇಳಿ ಅಂತ ಶುರು ಮಾಡಿದ್ರು.

'ಒಂದು ಊರು ' ಕಥೆ ಶುರು ಮಾಡಿದೆ, 'ನಿಮ್ಮೂರಿನ ಹಾಗೆ. ಅಲ್ಲೊಂದು ಇದರ ಹಾಗೆಯೇ ಒಂದು ಶಾಲೆ. ಅಲ್ಲೊಬ್ಬ ಹುಡ್ಗ, ಸುರೇಂದ್ರ ಅಂತ. ನಾ ಹೇಳ್ತಿರೋದು ನಿಜವಾಗ್ಲು ಆಗಿರೋ ಕಥೆ ಆಯ್ತು. ಕೇಳ್ತಿದೀರ? ಯಾವೂರು ಹೇಳಿ?'

'ಒಂದೂರು' ಮಕ್ಕಳೆಲ್ಲಾ ಕೂಗಿದ್ರು. ಎಲ್ಲರೂ ಅಲ್ಲ, ಒಂದೆರೆಡು ಮೂವರನ್ನ ಬಿಟ್ಟು. ಅವ್ರೇಕೆ ಅಷ್ಟು ಮೌನವಾಗಿದ್ರು ಗೊತ್ತಾಗ್ಲಿಲ್ಲ.

'ಹ್ಞಾ ಹ್ಞಾ... ಹಾಂ. ಅವನ ಶಾಲೇಲಿ ಒಬ್ರು ಟೀಚರ್ ಇದ್ರು. ಕಾಕತಿ ಅಂತ. ಏನವ್ರ ಹೆಸ್ರು ಹೇಳಿ?'

'ಕಕ್ಕತಿ', 'ಕಾಕೂತಿ', 'ಕಾಕತಿ', ಒಬ್ಬೊಬ್ರು ಒಂದೊಂದು ರೀತಿ ಹೇಳ್ಲಿಕ್ಕೆ ಶುರು ಮಾಡಿದ್ರು.

'ಹಾಂ.. ಕಾಕತಿ.. ಕಾಕತಿ ಕಣ್ರೋ.. ಆಯ್ತಾ. ಅವ್ರು, ಈಗ ನಾನು ಮಾಡಿದ್ನಲ್ಲ ಹಾಗೇನೆ ಮಕ್ಳನ್ನೆಲ್ಲಾ ಕೇಳಿದ್ರಂತೆ ಕ್ಲಾಸ್ ಚೆನಾಗಿ ಆಗ್ಬೇಕು ಅಂದ್ರೆ ಮಕ್ಕಳು ಹೇಗಿರ್ಬೇಕು ಅಂತ. ಅದಿಕ್ಕೆ ಆ ಮಕ್ಕಳು ನಿಮ್ಮ ಹಾಗೆ ಒಂದಷ್ಟು ಹೇಳಿದ್ರು ಇದೇ ಥರ - ಗಲಾಟೆ ಮಾಡ್ಬಾರ್ದು, ಟೀಚರ್ ಹೇಳಿದ್ದನ್ನ ಸರಿಯಾಗಿ, ತಪ್ಪು ಮಾಡದೆ ಮಾಡ್ಬೇಕು.. ಅದೂ ಇದು ಅಂತ. ಆಗ ಇದ್ರಲ್ಲಿ ಯಾವ್ದನ್ನಾದ್ರೂ ಮುರಿದ್ರೆ ಏನ್ ಮಾಡೋದು ಅಂತ ಟೀಚರ್ ಕೇಳಿದ್ದಕ್ಕೆ, ಸುರೇಂದ್ರ ನಿಮ್ಮ ಹಾಗೇನೆ ಜೋರಾಗಿ ಹೊಡೀರಿ ಸಾರ್ ಅಂತ ಹೇಳಿದ್ನಂತೆ. ಛೇ! ಪಾಪ. ಹಾಗೆ ಹೇಳಿದ್ದವ್ನೇ ಒಂದು ನಿಯಮವನ್ನ ಮುರಿದ್ಬಿಟ್ಟ. ಅವ್ನಿಗೆ ಟೀಚರ್ ಕೊಟ್ಟಿರೋ ಲೆಕ್ಕ ಮಾಡ್ಲಿಕ್ಕೆ ಬರ್ಲಿಲ್ಲ. ಈಗ ನಿಯಮದ ಪ್ರಕಾರ ಅವ್ನಿಗೆ ಜೋರಾಗಿ - ಅಂದ್ರೆ ಜೋರಾಗಿ ಅತ್ತು ಕೂಗೋ ವರೆಗೂ ಹೊಡೀಬೇಕು. ಟೀಚರ್ ಹಾಗೇನೆ ಮಾಡಿದ್ರು. ಅವ್ನ ತಲೆಯನ್ನ ಹಾಗೆಯೇ ಗೋಡೆಗೆ ರಪ್ ಅಂತ ಹೊಡೆದು ಒತ್ತಿ ಹಿಡಿದ್ರು ಗೊತ್ತಾ..' ನಾನು ಸ್ವಲ್ಪ ರಾಗ ಎಳೆದೆ. ಕ್ಲಾಸ್ ಸಂಪೂರ್ಣ ಮೌನವಾಗಿಹೋಯ್ತು. ಕೆಲವರು 'ಹ್ಹಂ.. ' ಅಂತ ಸಡನ್ ಪ್ರತಿಕ್ರಿಯೆ ಕೊಟ್ಟರು.

' ಹ್ಞಾಂ.. ಹಾಗೆ ಅವ್ನ ಸೂಟ್ಕೇಸ್ ಮೇಲೆ ನಾಲ್ಕು ಏಟು ರಪ ರಪ ಹೊಡೆದ್ರು. ಹೊಡೆದ ಮೇಲೆ ಕೈ ಬಿಟ್ರು. ತಕ್ಷಣ ಸುರೇಂದ್ರ ನೆಲದ ಮೇಲೆ ಬಿದ್ಬಿಟ್ಟ. ಅವನ ಕಿವೀಲಿ ರಕ್ತ ಹರೀತಾ ಇತ್ತು. ಜೊತೆಗೆ ಸೂಟ್ಕೇಸ್ ಮೇಲೆ ಬಾಸುಂಡೆ ಬಂದು ಅಲ್ಲೂ ಚರ್ಮ ಕಿತ್ತಿತ್ತು. ತಕ್ಷಣವೇ ಆಸ್ಪತ್ರೆಗೆ ಕರ್ಕೊಂಡು ಹೋದ್ರು. ಡಾಕ್ಟರ್ ಎಲ್ಲಾನೂ ನೋಡಿ ಹೇಳಿದ್ರು.. ' ನಾನು ಸ್ವಲ್ಪ ಗ್ಯಾಪ್ ನೀಡಿದೆ. ತರಗತಿ ಸಂಪೂರ್ಣ ಮಾನವಾಗಿತ್ತು. ಮುಂದೆ ಹೇಳಿ ಅನ್ನೋ ಬೇಡಿಕೆ ಅವ್ರ ಕಣ್ಣು ಬಾಯಿಗಳಲ್ಲಿ ಕಾಣ್ತಿತ್ತು.

'ಡಾಕ್ಟರ್ ಹೇಳಿದ್ರು, ಅವನ ಎರೆಡೂ ಕಿವಿಗಳೂ ಹೋಟ್ಹೋಗಿದ್ವು ಅಂತ. ಅಂದ್ರೆ ಇನ್ಮುಂದೆ ಅವ್ನಿಗೆ ಏನೇ ಮಾಡಿದ್ರೂ ಕಿವಿ ಕೇಳ್ಸೋಲ್ಲ. ಡಿಗ್ರಿ ಓದ್ಬೇಕು ಅನ್ನೋ ಆಸೆ ಇಟ್ಕೊಂಡವ್ನು ಹತ್ನೆ ಕ್ಲಾಸ್ ನ ಹೇಗೋ ಪಾಸ್ ಮಾಡ್ಕೊಂಡ. ಈಗ ಅಲ್ಲಿ ಇಲ್ಲಿ ಕೆಲ್ಸ ಮಾಡ್ತಾ ಹಾಗೆ ಒಂದಷ್ಟು ಪದ್ಯಗಳನ್ನ ಬರ್ಕೊಂಡು ಬದುಕ್ತಾ ಇದಾನೆ. ಅವ್ನಿಗೆ ಎರೆಡೂ ಕಿವಿಗಳು ಇನ್ನು ಜೀವನಾ ಫುಲ್ ಕೇಳ್ಸೊಳ್ಳ ಗೊತ್ತಾ!' ಕಥೆ ನಿಲ್ಲಿಸಿ ಒಂದು ಅರ್ಧ ನಿಮಿಷ ಗ್ಯಾಪ್ ನೀಡಿ ಕೇಳಿದೆ - ' ಈಗ ಹೇಳಿ ನಾನು ಹೊಡೀಲಾ ನಿಮ್ಗೆಲ್ಲಾ?'

ಎಲ್ರೂ ಒಟ್ಟಿಗೇ ಕೂಗಿದ್ರೂ - 'ಬೇಡಾ ಸರ್. ಪ್ಲೀಸ್. ಬೇಡ'. ನರಸಿಂಹ ಒಬ್ಬ ಮಾತ್ರ ಆ ಕಡೆಗೆ ತಿರುಗಿದ. ಏನೂ ಪ್ರತಿಕ್ರಿಯಿಸಲಿಲ್ಲ. ಅವ್ನ ಬಳಿಯೇ ಹೋಗಿ ಅತ್ತ ಕಡೆ ನಿಂತು ಅವನ ಮುಖ ನೋಡಿದೆ. ಅವನ ಕಣ್ಣಲ್ಲಿ ನೀರು ತುಂಬಿದ ಹಾಗಿತ್ತು. 'ಹೊಡೀಲಾ ಹೇಳು?' ಅಂತ ಕೇಳಿದೆ. 'ಬೇಡ ಸರ್ ಹೊಡಿಬೇಡಿ. ನೋವಾಗತ್ತೆ' ಅಂದ. ನನ್ನ ಕಣ್ಣೂ ಒದ್ದೆಯಾಗಿತ್ತು. ಆದ್ರೆ ನಾ ತೋರಿಸಿಕೊಳ್ಳಿಲ್ಲ.

ಹಾಗಿದ್ರೆ  ಮತ್ತೇನು ಮಾಡೋದು ಎಲ್ರನ್ನೂ ಕೇಳಿದೆ. 'ಒಂದು ಕೆಲ್ಸ ಮಾಡಿ ಸರ್. ಮೊದ್ಲಿಗೆ ತಿಳುವಳಿಕೆ ಹೇಳಿ. ಕೇಳ್ಳಿಲ್ಲ ಅಂದ್ರೆ ಎರಡನೆ ಸರಿಗೆ ತಪ್ಪು ಮಾಡಿದವ್ರ ಬ್ಯಾಗ್ ಗೆ ಹೊಡೀರಿ. ಸರಸ್ವತಿಗೆ ನೋವಾಗತ್ತಲ್ಲ ಅಂತ ನಾವು ಅದನ್ಯಾವ್ದನ್ನೂ ಮುರಿಯಲ್ಲ...' ರಂಜಿತ ಹೇಳಿದ್ಲು. ಸಮಯ ಮುಗಿದಿದ್ರಿಂದ ನಕ್ಕು ಎಲ್ಲರಿಗೂ ಬಾಯ್ ಮಾಡಿ ಮತ್ತೆ ಯಾವಾಗ್ಲಾದ್ರೂ ಬರ್ತೇನೆ ಅಂತ ಹೇಳಿ ಹೊರಬಂದೆ. ಹೊರಬಂದ್ಮೇಲೆ ಅನ್ನಿಸ್ಲಿಕ್ಕೆ ಶುರು ಆಯ್ತು ನಾನು ಬಹಳ ದೊಡ್ಡ ತಪ್ಪು ಮಾಡಿದ್ನೇನೋ ಈ ಕಥೆಯನ್ನ ಮಕ್ಕಳಿಗೆ ಹೇಳಿ ಅಂತ. ನಾನು ಹೊಡೆದ್ರೆ ಏನಾಗಬೋದು ಅನ್ನೋ ಪರಿಣಾಮದ ಮುಖೇನ ಮಕ್ಕಳು ಹೊಡೆತಕ್ಕೆ, ಶಿಕ್ಷೆಗೆ ಅವರೆ ಸ್ವತಃ ಎಲ್ಲೂ ಸಹ ಆಸ್ಪದ ಮಾಡಿಕೊಡಕೂಡದು, ಹಾಗೂ ಎಲ್ಲೇ ಅದು ನಡೆದರೂ ಅದನ್ನ ತಡೆಯೋವ್ರಾಗ್ಬೇಕು ಅನ್ನೋ ಉದ್ದೇಶದೊಂದಿಗೆ ಹೀಗೆ ಮಾಡಿದ್ದು ಅಂತ ಎಷ್ಟೇ ಸಮರ್ಥಿಸಿಕೊಂಡ್ರು, ನಾನು ಮಾಡಿದ್ರಲ್ಲಿ ಒಂದು ತಪ್ಪು ಅಡಗಿತ್ತು. ನಾನು ಶಿಕ್ಷೆಯ ಬಗ್ಗೆ ಮಕ್ಕಳಲ್ಲಿ ಮತ್ತಷ್ಟು ಭಯ ಮೂಡಿಸಿದೆನೇ ಎನ್ನುವ ಪ್ರಶ್ನೆಯೊಂದು ಕಾಡತೊಡಗಿತು. ಹೌದು. ಈಗ ಮಕ್ಕಳು ಶಿಕ್ಷೆಯೆಂದ್ರೆ ಇನ್ನೂ ಹೆದರ್ತಾರೋ ಏನೋ! ಛೇ! ಹಾಗೇನು ಇಲ್ಲ ಅನ್ನಿಸ್ತದೆ ಅಲ್ವಾ?

ಇಷ್ಟಕ್ಕೂ ಇವ್ರೆಲ್ಲಾ ಆರನೇ ತರಗತಿ ಮಕ್ಕಳು. ಆ ಕಥೆ ಡಿಪಾರ್ಟ್ಮೆಂಟ್ ಆಫ್ ಎಲಿಮೆಂಟರಿ ಎಜುಕೇಷನ್ ಅವ್ರು ನಡೆಸಿದ ವರ್ಕ್ ಷಾಪ್ ಗಳಲ್ಲಿ ಶಿಕ್ಷಕರೇ ಹೇಳಿದ ನೈಜ ಕಥೆ. ಈ ತರಗತಿಯ ಸನ್ನಿವೇಶಕ್ಕೆ ತಕ್ಕಂತೆ ಸ್ವಲ್ಪ ಬದಲಾಯಿಸಿಕೊಂಡಿದ್ದೆ, ಆರಂಭದಲ್ಲಿ, ಅಷ್ಟೇ!



# Wish childhood was shorter

-Shilpa

For that clueless child that I was, everything was perfect for most of the childhood. Being guided by experienced adults, at every step, I never had to worry on what I needed to do next. I was always told what had to be done, and how.

What and how,

What and how,

That's how it all went,

My childhood somehow. (*wah, wah, wah, kya baath hain. Shukriya*)

'Why' was never on the horizon and hence did not exist. Every single mistake, every single flaw of mine were pointed out. Feared doing mistakes and being scolded or punished even before I started to do anything. I conformed to everything and was in line with my adults. Particularly remember wetting my uniform in nursery days, every time my class teacher raised her voice. Teacher was clueless as to why and shared her concern with my adults, who were clueless too. Even today, it is tiring for me to listen to loud volumes. My first seven years were spent in constant fever and was fed so much antibiotics that my milk tooth were yellow. Guessing it was fear fever. Remember the cold wave that used to go down my tummy, every time mother looked at me in anger.

Studies and marks were as simple as a blink, all the way till engineering, because, I was supposed to. And with a mammoth memory that I had and which I dearly miss now, it was all a cake walk. Am sure, my poor little brother hated me for this, for he had a memory of a dog and was constantly pointed out for not studying as well as me. Boy, he was a rebel and totally 'out of line'. He was my hero, when he broke open the glass square of our bedroom door and freed us from ropes. Both of us had toppled dad's scooter while playing and were tied up with ropes and were not fed for a day. After all, grandfather was a police constable and dad learnt a thing or two, maybe he was punished as a child too. Both me, and my younger brother grew up with different flavours of fears.

It was all perfect and went according to our experienced adult's wishes and hopes, until, I started to think on my own, which was quite late in my life, given our conditioning. Thanks to my introduction with nature, I felt loved going back into forests every weekend. That quiet time did wonders to me, although, I was looked at as a black duck in the family for doing so. Being a girl of 'marriageable' age, I was interested in only one thing – getting away to mountains. I would take off on Friday evenings with which ever trek group was on its way. Was totally ignorant of the many different ways, those fears had manifested in me. Maybe some of them still do and am yet to learn to heal out of them. I had now tasted blood. I wanted more of this quiet time. Weekend treks grew into weeks of travel. Eventually, moved away from adults. With some breathing time, read 'no instruction time', reflections began. Like a flashback, my whole history until then, played all over again in the theater of my mind. This time, connecting the dots and making meaning. 'Why' started to rise above horizon and I started to see and understand 'why'. I stopped screaming back and blaming my adults for what happened. I understood that, they loved me and they gave me their best. For their best, they only knew so much.

# ಗೌರಿ ಹಬ್ಬ- ನನ್ನ ಬಾಲ್ಯಕ್ಕೊಂದು ಅಸ್ಮಿತೆ

-ಚಿಕ್ಕವೀರೇಶ್ , ಬೆಂಗಳೂರು

ಮೊನ್ನೆ ಮೊನ್ನೆ ಊರಿಗೆ ಹೋದಾಗ ನಾ ಹೋಗೋ ಬೈಕ್ ಗೆ ಅಡ್ಡಲಾಗಿ ಒಂದಷ್ಟು ಸೀರೆ ಧರಿಸಿದ ಪುಟ್ಟ ಹುಡುಗಿಯರು ಅಡ್ಡ ಬಂದು ಹಣ ಕೇಳಿದಾಗ ಅದೇ ಕ್ಷಣ ನನ್ನ ಬಾಲ್ಯ ಮತ್ತು ಕಾಲೇಜ್ ದಿನಗಳ ನೆನಪಿನ ಬುತ್ತಿ ತೆರೆದುಕೊಂಡಿತು. ನಾ ಹೋಗಿದ್ದು ಗೌರಿ ಹಬ್ಬದ ನಂತರದ ದಿನ. ನಾ ಹಳ್ಳಿಯಲ್ಲೇ ಬೆಳೆದಿದ್ದರಿಂದ ಸಾವಿರ ನೆನಪುಗಳು ಈ ಗೌರಿ ಹಬ್ಬದ ಸುತ್ತಲೇ ಇವೆ. ಗೌರಿ ಹಬ್ಬ ಬಂದರೆ ಸಾಕು ಮನೇಲಿ ಸಕ್ಕರೆ ಅಚ್ಚು ಮಾಡಿ ಅಂತ ೧೫- ೨೦ ದಿನ ಇದ್ದಾಗಲೇ ನನ್ನ ಅಮ್ಮನಿಗೆ ಹಿಂದೆ ಬೀಳುತಿದ್ದೆ. ಇನ್ನು ಅಮ್ಮನೋ ಮಾಡ್ತೀನಿ ಮಾಡ್ತೀನಿ ಅಂತ ಗೌರಿ ಹಬ್ಬದ ವರೆಗೂ ಮಾಡದೇನೇ ಮುಂದೂಡುತಿದ್ದರು. ಇನ್ನು ಗೌರಿ ಹಬ್ಬದ ದಿನವಂತೂ ಅಕ್ಕನಿಗೆ ರೆಡಿ ಆಗಲಿಕ್ಕೂ ಬಿಡದೆ ಬೇಗ ಆರತಿ ಮಾಡು ಅಂತ ಹಿಂದೆ ಬಿದ್ದು ದೇವಸ್ಥಾನಕ್ಕೆ ಓಡುತಿದ್ದೆ. ಅಲ್ಲೋ ನಮ್ಮ ಕ್ಲಾಸಿನ ಹುಡುಗಿಯರನ್ನು ಕಂಡು ನಕ್ಕು ಅಕ್ಕ ಆರತಿ ಮಾಡಿದಾಕ್ಷಣ ತಟ್ಟೆಯಿಂದ ಸಕ್ಕರೆ ಆರತಿ ಎತ್ತಿ  ಓಡ್ತಿದ್ದೆ. ಇನ್ನು ಕಾಲೇಜ್ ದಿನದಲ್ಲಂತೂ ಈ ಲಂಗ ದಾವಣಿ ಹುಡುಗಿಯರನ್ನು ಸೀರೆಯಲ್ಲಿ ನೋಡಲು ದೇವಸ್ಥಾನದ ಸುತ್ತವೇ ನಮ್ಮ ಪೋಲಿ ಹುಡುಗರ ಗ್ಯಾಂಗ್ ಜೊತೆ ಹಾಜರಾಗುತಿದ್ದೆ. ಆ ಉರಿಯುವ ದೀಪದ ಬೆಳಕಿನಲ್ಲಿ ಆ ಹುಡುಗಿಯರ ಚಂದ ವಯ್ಯಾರ ಹತ್ತು ಪಟ್ಟು ಆಗಿ ಅವರ ಹಿಂದೆಯೇ ಓಡಿದ ನೆನಪುಗಳು ಹಾ ಹಾ ಇವತ್ತಿಗೂ ಎದೆಗೆ ಕಿಚ್ಚು ಹಚ್ಚುತ್ತೆ. ಆರತಿ ತಟ್ಟೆ ಎಕ್ಕದ ಹೂವು ಮತ್ತು ತಂಗಡಿಕಿ ಹೂವುಗಳಿಂದ ಸಿಂಗರಿಸಿಕೊಂಡು ಚಂದಪ್ಪಗೆ ಒಂದು ಹೂವು ಚುಕ್ಕಿಗೊಂದು ಹೂ ಎಂದು ಎಸೆಯುತ್ತಾ ಹೋಗುವ ಹುಡುಗಿಯರ ವಾರೆ ನೋಟ ಅದೆಷ್ಟೋ ದಿನ ಬಿಟ್ಟೂ ಬಿಡದೆ ಕಾಡುತಿತ್ತು. ಇನ್ನು ಇಷ್ಟದ ಹುಡುಗಿಯರ ಬರುವಿಕೆಗೆ ಕಾದು ಕಾದು ಬರದೆ ಇಂಗು ತಿಂದ ಮಂಗನಂತಾಗಿ ಬಂದ ಗೌರಿ ಹಬ್ಬಗಳೂ ಇವೆ. ಇಂಥದೇ ಹಬ್ಬದ ದಿನದಲ್ಲಿ ಸೀರೆ ಹಾಕಿದ ಚೆಲುವಿಯ ಕಂಡು ಬರೆದ ಕವನ ಇವತ್ತು ಕೂಡ ನನ್ನ ಪುಸ್ತಕದಲ್ಲಿ ಇದೆ.



ಬೆಳದಿಂಗಳ ರಾತ್ರಿಯಲ್ಲಿ

ಗೌರಿ ಹಬ್ಬದಿ ಅಪರೂಪಕ್ಕೆ ಸೀರೆ ಉಟ್ಟು

ಆರತಿ ತಟ್ಟೆ ಹಿಡಿದು ಹೊರಟಿದ್ದಳು ಹುಡುಗಿ

ಬೀಸುವ ತಂಗಾಳಿಗೆ ದೀಪದ

ಮಂದ ಬೆಳಕು ಅವಳ ಸೌಂದರ್ಯ ಹೆಚ್ಚಿಸುತಿತ್ತು

ಬಿಟ್ಟೂ ಬಿಡದೆ ನೋಡುತಿದ್ದ ಚಂದ್ರ ಅವಳಂದವ ನನ್ನ ಜೊತೆ

ಗುಂಗುರು ಕೂದಲ ಬೆಡಗಿಯ ಕೈ ಬಳೆ ಸದ್ದು

ಕಾಲಗೆಜ್ಜೆ ನಿನಾದ ಇನ್ನೂ ಇದೆ ಕಿವಿ ತಮಟೆಯ ಮೇಲೆ

ಇನ್ನೂ ಇದೆ ನನ್ನ ಕಣ್ಣೊಳಗೆ ಆವಳ ಚೆಲುವಿನ ಚಿತ್ತಾರ

ಮಳೆ ಮೋಡಗಳ ನಡುವಿನ ಕೋಲ್ಮಿಂಚಿನಂಥ ನಗುವು.

ಇನ್ನು ಗೌರಿ ಹಬ್ಬದ ನಂತರ ಕುಂತಿ ಬಸಪ್ಪ ಗೆ ವಂತಿಗೆ ಗೆ ಅಕ್ಕಂದಿರ ಜೊತೆ ರೋಡ್ ಅಲ್ಲಿ ಹಗ್ಗ ಹಿಡಿಯಲು ಹೋಗಿ ಬಸ್ ಬೈಕ್ ಅಡ್ಡಗಟ್ಟಿ ದುಡ್ಡು ಸಂಗ್ರಹಿಸುತ್ತಿದ್ದೆವು ಕೆಲವರು ದುಡ್ಡು ಕೊಟ್ಟರೆ ಕೆಲವೊಬ್ಬರು ಅಡ್ಡ ಹಾಕಿದಕ್ಕೆ ಸಹಿಸದೆ ಹಿಂದೆ ಬಿದ್ದು ಹೊಡೆಸಿಕೊಂಡ ಉದಾಹರಣೆ ನೂರಾರು. ಸಂಗ್ರಹಿಸಿದ ದುಡ್ಡಲ್ಲಿ ಸ್ವಲ್ಪ ಹಣ ಎಗರಿಸಿ ಅಂಗಡಿ ಮನೆಗೆ ಹೋಗಿ ಪೇಡಾ ಚಿಕ್ಕಿ ತಿಂದು ಮನೆ ಸೇರುತಿದ್ದೆ. ಇದು ನಮ್ಮ ಉತ್ತರ ಕರ್ನಾಟಕದ ಮಣ್ಣಿನ ಹಬ್ಬ. ನಮ್ಮ ಹಳ್ಳಿಯ ಹಬ್ಬ. ಗೌರಿ ಹಬ್ಬ. ಮಹಿಳೆಯರು ವಿಶೇಷವಾಗಿ ಅವಿವಾಹಿತರು ಸಂಭ್ರಮಿಸುವ ಹಬ್ಬ. ದಸರಾ ಅಮಾವಾಸ್ಯೆ ನಂತರದ ಹುಣ್ಣಿಮೆಗೆ ಸಣ್ಣ ಗೌರಿ ಹುಣ್ಣಿಮೆ ಮತ್ತು ದೀಪಾವಳಿಯ ಅಮಾವಾಸ್ಯೆಯ ನಂತರದ ಹುಣ್ಣಿಮೆಗೆ ದೊಡ್ಡ ಗೌರಿ ಹುಣ್ಣಿಮೆ ಎಂದು ಕರೆಯುವುದುಂಟು. ಸಣ್ಣ ಹುಡುಗಿಯರಿಂದ  ವಿವಾಹಿತರೆಲ್ಲರು ಸೀರೆ ಉಟ್ಟು ತಟ್ಟೆಯಲ್ಲಿ ಸಕ್ಕರೆ ಅಚ್ಚು, ತಂಗಡಿಕಿ ಎಕ್ಕದ ಹೂವಿನಿಂದ ಸಿಂಗರಿಸಿ ದೇವಸ್ಥಾನದಲ್ಲಿ ಮಣ್ಣಿನಿಂದ ಮಾಡಿದ ಗೌರಿ ಗೆ ಬೆಳಗಿ ಸಂಭ್ರಮಿಸುವುದನ್ನು ನೋಡುವುದೇ ಚೆಂದ. ಆ ದಿನಗಳಂತೂ ಹಳ್ಳಿ ಗಳು ವಧುಗಳ ಸಮಾವೇಶದಂತೆ ಕಾಣುತ್ತವೆ.  ಇದು ಬರಿ ಕೃತಕ ಹಬ್ಬವೆನಿಸದೆ ಪ್ರಕೃತಿಯನ್ನು ಆರಾಧಿಸುವ ಹಬ್ಬ ಎನಿಸುತ್ತದೆ. ಮಣ್ಣು, ದಾರೀಲಿ ಸಿಗುವ ಹೂವು ಗಳನ್ನೇ ಪೂಜಿಸುವ ಹಬ್ಬವೆನಿಸುತ್ತದೆ. ಇಲ್ಲಿ ಹೆಣ್ಣು ಮಕ್ಕಳು ಶಾಲೆ ,ಮನೆ ಕೆಲಸ, ಕೂಲಿ ಕೆಲಸ ಬಿಟ್ಟು ಸ್ವಲ್ಪ ದಿನ ಗೌರಿ ಮಕ್ಕಳಾಗುತ್ತಾರೆ. ಮನೆಯಲ್ಲಿ ಊಟ ಮಾಡಿ ತಾಂಬೂಲ ತಿಂದು ಹೆಣ್ಣು ಮಕ್ಕಳೆಲ್ಲ ಸೇರಿ ಸಂಭ್ರಮಿಸುತ್ತಾರೆ. ಹಣ ಸಂಗ್ರಹಿಸಿ ಹೆಣ್ಣು ಮಕ್ಕಳೇ ಓಣಿಗೊಂದು ಕುಂತಿ ಬಸಪ್ಪ ಕೂರಿಸಿ ಊಟ ಹಾಕುತ್ತಾರೆ. ನಂಗೆ ಇಲ್ಲಿ ಗೌರಿ ಹೆಣ್ಣು ಮಕ್ಕಳ ಪ್ರತಿನಿಧಿಯಾಗಿ ಕಾಣುತ್ತಾಳೆ. ಅಸ್ಮಿತೆಯಂತೆ ತೋರುತ್ತಾಳೆ. ಆದರೆ ಇವತ್ತು ಹಳ್ಳಿಯಲ್ಲೂ ಈ ಹಬ್ಬಗಳು ಕಣ್ಮರೆ ಆಗುತ್ತಿರುವುದು ದುರಂತವೇ ಸರಿ. ಮೊನ್ನೆ ಗೌರಿ ಹಬ್ಬಕ್ಕೆ ಊರಿಗೆ ಹೋದಾಗ ಮುಂಚಿನ  ಸಂಭ್ರಮ ಇಲ್ಲದ್ದು ನೋಡಿ ಮನಸಿಗೆ ಕಸಿವಿಸಿ ಆಗಿದ್ದು ಸತ್ಯ. ಪರೋಕ್ಷವಾಗಿ ಪ್ರಕೃತಿಯನ್ನು ಆರಾಧಿಸುವ ಇಂತಹ ನಮ್ಮ ನೆಲದ ಹಬ್ಬ ಉಳಿಸಬೇಕಾದ್ದು ನಮ್ಮ ಕರ್ತವ್ಯ ಕೂಡ ಹೌದು.

# ಒಂದು ದಿನದ ಮೀಸೆಯ ಕಥೆ

-ಯತಿರಾಜ ಶರ್ಮಾ

[ಈಚೀಚೆಗೆ ಶಿಕ್ಷೆ ರಹಿತ ಶಿಕ್ಷಣದ ಕುರಿತಾಗಿ ಸ್ವಲ್ಪೇನೊ ಕೆಲಸ ಮಾಡೋವಾಗ ನಾನು ಬದಲಾಗ್ಬಿಟ್ಟೇದೀನಲ್ಲ ಅನ್ಸೋದು. ನನ್ನ ಆಗಿನ ವಿಕೃತತೆಗಳನ್ನ ನೆನೆಸಿಕೊಂಡು ಅಚ್ಚರಿಯೂ ನಗುವೂ ಬರುವುದು. ಹಿಗೆ ಆ ವಿಕೃತತೆಗೆ ಕನ್ನಡಿಯಂತಿದ್ದ ನಂದೊಂದು ಹಳೇ ಕಥೆಯನ್ನ ಹೇಳ್ಕೊಳ್ತಾ ತಿರುಗಬೇಕಾದ್ರೆ ಇದನ್ನ ಬರೀಬೇಕು ಅಂತ ಅನ್ಸಿ ಬರೆದೆ. ಕಥೆಯನ್ನ ಸ್ವಲ್ಪ ತಿರುಚಿದೀನಿ ಕೂಡ ಕೊನೆಯಲ್ಲಿ. ಆದರೆ ವಿಕೃತತೆ ಹಾಗೆಯೇ ಇದೆ].

ನಾನಾಗ 7ನೇ ಕ್ಲಾಸ್ ಇರಬೇಕು. ಒಂಭತ್ತರಲ್ಲಿದ್ದ ಹುಡುಗರದ್ದು ಬಹಳ ಹುಡುಗಾಟಿಕೆಯ ವಯಸ್ಸು. ಅವರಿಗಿಂತ ಚಿಕ್ಕವರನ್ನ ರೇಗಿಸೋದು, ಕೀಟಲೆ ಮಾಡೋದು ಎಂದ್ರೆ ಆ ವಯಸ್ಸಿನ ಗುಣಲಕ್ಷಣಗಳಿರಬೇಕು. ಅವನೊಬ್ಬ ನನ್ನೊಟ್ಟಿಗೆ ಜಗಳಕ್ಕೆ ನಿಂತಿದ್ದ. ಯಾವುದೋ ಕಾರಣಕ್ಕೆ ಅವನು ನನಗೆ ಕೀಟಲೆ ಮಾಡಿದ್ದದ್ದು ರೇಗಿಸಿತ್ತು. ನಾನು ಹೊಡೆದಿದ್ದೆನೇನೋ. ಅವನು ನಾನೀಗ ಹೇಳಲಾಗದಂತಹ ಮಾತುಗಳನ್ನಾಡಿದ. ನನ್ನ ಕುರಿತಾಗಿ ಅಲ್ಲ, ನನ್ನಮ್ಮನ ಕುರಿತಾಗಿ. ಆಗೆಲ್ಲಾ ರೋಷಕ್ಕೆ ಒಂದು ಕಾರಣ ಬೇಕಿರ್ತಿತ್ತು ಅಷ್ಟೇ. 'ನನ್ನ ಬಗ್ಗೆ ಬೇಕಿದ್ರೆ ಮಾತಾಡು. ನನ್ನಮ್ಮನ್ ಬಗ್ಗೆ ಮಾತಾಡ್ಬೇಡ..' ಅಂತ ನಾನು ನನ್ನನ್ನಮ್ಮನ ಮಾನರಕ್ಷಣೆಯ ಗುತ್ತಿಗೆ ಹೊತ್ತವನಾಗಿ ಅವನನ್ನ ಜಲ್ಲಿಯ ಮೇಲೆ ನೂಕಿದೆ. ಅದೇ ನಾ ಮಾಡಿದ ತಪ್ಪು. ತಳ್ಳೋದು ತಳ್ಳಿದೆ, ಜಲ್ಲಿಯ ಮೇಲೆ ತಳ್ಬಿಟ್ಟೆ. ಅವನ ಎರೆಡೂ ಕೈಗಳು ತುಂಬೋ ಅಷ್ಟು ಕಲ್ಲುಗಳು ಅಲ್ಲಿದ್ವು . ತಳ್ಳಿದ ಮರುಕ್ಷಣವೇ ನನಗೆ ನನ್ನ ತಪ್ಪಿನ ಅರಿವಾಗಿ ಹಿಂದೆ ತಿರುಗಿ, ತಲೆಗೆ ಕೈಯಿಂದ ರಕ್ಷಣೆ ಕೊಟ್ಟು ಅಂಡು ಬಾಗಿಸಿ ನಿಂತುಬಿಟ್ಟೆ, ಹೊಡೆದ್ರೆ ಅಂಡಿಗೆ ಹೊಡ್ಕೋಳ್ಳಿ ಅಂತ. ನಾ ಎಣಿಸಿದ್ದೆಲ್ಲಾ ತಪ್ಪಾಯ್ತು. ಅವನು ಕಲ್ಲುಗಳಲ್ಲಿ ಹೊಡೆಯಲಿಲ್ಲ ಸದ್ಯ - ಒಂದು ಮಟ್ಟಿಗೆ ಒಳ್ಳೆಯ ಹುಡುಗ. ಓಡಿ ಬಂದು ನನ್ನ ಕುತ್ತಿಗೆ ಸುತ್ತ ಕೈ ಹಾಕಿ, ಹಿಂದಕ್ಕೆ ನನ್ನನ್ನ ಬಾಗಿಸಿ, ಕಾಲೆರೆಡಕ್ಕೆ ಅವನ ಕಾಲಿಂದ ಹೊಡೆದ. ನೆಲಕ್ಕೆ ನನ್ನ ಅಂಡು ಬಡಿಯಿತು. ಮೂಗಿಂದ ನೀರು ಸೋರಿತು. ಒಂದೆರೆಡು ಕ್ಷಣಗಳ ಹಿಂದೆ ಏಟು ಬಿದ್ದರೆ ಅಂಡಿಗೇ ಬೀಳಲಿ, ಅಡ್ಡಿಯಿಲ್ಲ ಎಂದು ಎಣಿಸಿದ ನನಗೆ, ಈಗಲೂ ಅಂಡಿಗೇ ಏಟು ಬಿದ್ದಿದ್ದರೂ ನಖಶಿಕಾಂತ ಉರಿಯಿತು. ನನಗೆ ಅರಿವಾಯ್ತು. ನನ್ನ ಕೈಯಲ್ಲಿ ಇವನನ್ನ ಬಡೀಯೋ ಶಕ್ತಿಯಿಲ್ಲ ಎಂದು. ಆದರೂ ಹೇಗಾದರೂ ಪಾಠ ಕಲಿಸಬೇಕೆನ್ನುವ ರೋಷ ಒಳಗೇ ಹತ್ತಿ ಉರೀತಿದ್ದಿದ್ರಿಂದ, 'ನಿನಗೆ ಸರಿಯಾಗಿ ಪಾಠ ಕಲಿಸ್ತೀನಿ. ನಮ್ಮಪ್ಪನ್ನ ಕರಕೊಂಡು ಬರ್ತೀನಿ' ಎಂದೆ. ಏಳನೇ ತರಗತಿಯ ಹುಡುಗನಾಡುವ ಮಾತುಗಳೇ ಅವು ಎಂದು ಈಗಲೂ ನಗು ಬರುತ್ತೆ. ಈ ಮಾತುಗಳಿಗೆಲ್ಲಾ ಜನ ಹೆದರಿಕೊಳ್ಳೋಹಾಗಿದ್ರೆ ನಮ್ಮ ಐ.ಡಿ ಕಾರ್ಡ್ ಬದಲು ನಮ್ಮಮ್ಮ ಅಪ್ಪಂದಿರ ಫೋಟೋಗಳನ್ನ ನೇತು ಹಾಕೊಂಡು ಓಡಾಡಿದ್ರೆ ಸಾಕಿತ್ತು. 'ನಿಮ್ಮಪ್ಪನೂ ನಿನ್ನ ಹಾಗೆಯೇ ಓಲೆ ತೊಟ್ಕೊಂಡಿದಾನ? ನಿಮ್ಮಪ್ಪ ಗಂಡಸಾದ್ರೆ, ನಿಮ್ಮಪ್ಪನಿಗೆ ಮೀಸೆ ಇದ್ರೆ ನಿಮ್ಮಪ್ಪನ್ನ ಕರಕೊಂಡು ಬಾ.' ಅಂತ ಅವನು ಮರು ಸವಲು ಹಾಕಿ ಉರಿಯೋ ಬೆಂಕಿಗೆ ತುಪ್ಪ ಸುರಿದ. ನನಗೆ ಮನಸ್ಸಿಗೆ ನಾಟಿದ್ದು ಆತ ಅಪ್ಪನ ಬಗ್ಗೆ ಏಕವಚನದಲ್ಲಿ ಮಾತಾಡಿದ್ದು. ಆ ಕ್ಷಣವೇ ಕ್ಲಾಸಿಗೆ ಓಡಿ, ಬ್ಯಾಗ್ ನಿಂದ ಪುಸ್ತಕವೊಂದನ್ನ ತೆಗೆದು ಒಂದು ಪತ್ರ ಬರೆದೆ, ಹೆಡ್ ಮೇಡಮ್ ಗೆ. ನಮ್ಮಪ್ಪ ಎಂದೂ ಹೇಳ್ತಿದ್ದದ್ದು, ಏನೇ ದಾಖಲೇ ಇದ್ರೂ ಅದರ ಪ್ರತಿಯೊಂದನ್ನ ಇಟ್ಟಿರಬೇಕು ಅಂತ. ಆಗ ಅಲ್ಲೆಲ್ಲೂ ಜೆರಾಕ್ಸ್ ಅಂಗಡಿ ಇರಲಿಲ್ಲವಾದ್ದರಿಂದ, ಅದರ ಮತ್ತೊಂದು ಪ್ರತಿಯನ್ನು ಕೈಯಲ್ಲೇ ಬರೆದೇ. ಕ್ಲಾಸಲ್ಲಿ ನಾನೊಬ್ಬನೇ. ಮೂಗಲ್ಲಿ, ಕಣ್ಣಲ್ಲಿ ಸುರಿಸಿಕೊಳ್ಳುತ್ತಾ, ನಡು ನಡುವೆ ಒರೆಸಿಕೊಳ್ಳುತ್ತಾ, ಯಾವುದೋ ಸತ್ಯಾಗ್ರಹ ಚಳುವಳಿಯಲ್ಲಿ ಅತೀವವಾದ ನೋವು ಅನುಭವಿಸಿ, ಸಾವಿನ ಪತ್ರವೊಂದನ್ನ ಬರೆಯುವವರ ಹಾಗೆ ತೀವ್ರತೆಯಿಂದ ಬರೆಯುತ್ತಿದ್ದೆ.

ಬರೆದು ಮುಗಿಸ್ದೆ. ಕಾಲಾಂತರದಲ್ಲಿ ಆ ಪತ್ರ ಎಲ್ಲೋ ಕಳೆದು ಹೋಯ್ತು. ಆ ಪತ್ರದಲ್ಲಿ ನನಗಾದ ನೋವನ್ನ, ಹಾಗೆ ಅವನ ನೈತಿಕತೆಯನ್ನ ಪ್ರಶ್ನಿಸಿ, ಅವನಿಗೆ ಶಿಕ್ಷೆ ನೀಡಲೇ ಬೇಕೆಂದು ಅಹವಾಲು ತೋಡಿದ್ದೆ.

ಆ ಪತ್ರವನ್ನ ಹೆಡ್ ಮೇಡಮ್ ಗೆ ಕೊಟ್ಬಾಗ, ಓದ್ತೇನೆ ಅಂತ ಹೇಳಿ ನನ್ನ ಸಮಾಧಾನ ಮಾಡಿ ಕಳಿಸಿದ್ರು. ಅವರು ಸಮಾಧಾನ ಮಾಡಿದ ಪರಿ ನೋಡಿ, ಅವನಿಗೆ ಸರಿಯಾದ ಶಿಕ್ಷೆಯಾಗ್ತದೆ ಅನ್ನೋ ನಂಬಿಕೆ ಅಷ್ಟಾಗಿ ಬರಲಿಲ್ಲ. ಮನೆಗೆ ಹೋದವ್ನೇ ಅಪ್ಪ ಬರೋದನ್ನೆ ಕಾಯ್ತಿದ್ದೆ. ಅಪ್ಪ ಬಂದ ಮೇಲೆ ಅಪ್ಪನಿಗೆ ನಾ ಬರೆದಿದ್ದ ಪತ್ರವನ್ನ ಕೊಟ್ಟೆ. ಅಪ್ಪ ಓದಿ, ಒಂದು ದೀರ್ಘ ಉಸಿರನ್ನ ಎಳೆದುಕೊಂಡು, ಮೀಸೆ ಬೆಳೆಯೊ ಜಾಗದ ಮೇಲೆ ಕೈ ಇಟ್ಟು ನಿಂತ್ರು. 'ಹಾಂ…', ಅಪ್ಪ ಮಾತು ಶುರು ಮಾಡಿದ್ರು. 'ಅಲ್ವೋ ಪೆದ್ದ. ನಾನು ಗಂಡಸಾಗಿಲ್ದೆ ಇದ್ರೆ ನೀನು ಅಕ್ಕ ಹೇಗೋ ಹುಟ್ತಿದ್ರಿ? ಹ್ಹಾ.. ಹ್ಹಾ… ಹೋಗ್ಲಿ ಬಿಡು. ಈಗ ನಾನು ಗಂಡಸೇನೋ ನಿಜ. ಆದ್ರೆ ಅವನ  ಎರಡನೇ ಸವಾಲಿದ್ಯಲ್ಲ ಮೀಸೆದು, ನಂಗೆ ಮೀಸೆ ಇಲ್ವಲ್ಲ ಏನು ಮಾಡೋದು?" ಅಪ್ಪ ನನ್ನೇ ಕೇಳಿ ನಗ್ತಾ ನಗ್ತಾ ಎದ್ದು ಹೋಗ್ಬಿಟ್ರು . ನನಗೆ ಅಪ್ಪನಿಗೆ ಮೀಸೆ ಇದ್ಯೋ, ಅಪ್ಪ ಗಂಡಸೋ ಅಲ್ವೋ ಅನ್ನೋದ್ರಲ್ಲೆಲ್ಲಾ ಚಿಂತೆ ಇರಲಿಲ್ಲ. ಅದಕ್ಕೆ ಉತ್ತರವೂ ಬೇಕಿರ್ಲಿಲ್ಲ ಅವನಿಗೆ ಶಿಕ್ಷೆ ಆಗಬೇಕಿದ್ದಿತ್ತಷ್ಟೇ! ಈಗ ನೆನೆಸ್ಕೊಂಡ್ರೆ ನಗು ಬರತ್ತೆ. ನಾನು ಅಷ್ಟು ಗಂಭೀರವಾಗಿದ್ರೂ , ಅಪ್ಪ ಇದನ್ನೆಲ್ಲಾ ಅಷ್ಟು ಸಲೀಸಾಗಿ ನೋಡೀಬಿಟ್ರಲ್ಲ ಎಂದು ಇನ್ನೂ ಬೇಸರವಾಯ್ತು. ಆ ಅವಿನಾಶನಂಥ ಹುಡುಗರನ್ನ ತಡೆಯೋವ್ರು, ಬಡಿಯೋವ್ರು ಯಾರೂ ಇಲ್ವಾ? ನಾಳೆ ನಾ  ಶಾಲೆಗೆ ಹೇಗೆ ಹೋಗೋದು? ಒಬ್ಬ ಬಕಾಸುರನ ಹಾವಳಿಯನ್ನ ತಡೆಯೋಕ್ಕಾಗದ ಜನರ ಹಾಗೆ ಪೇಚಾಡಿದ್ದೆ. ನನ್ನ ದೃಷ್ಟಿಯಲ್ಲಿ ಒಂದು ಧರ್ಮಯುದ್ಧವಾಗಿ ಆ ಅವಿನಾಶನ ಅಹಂಕಾರ, ದರ್ಪ, ಕೆಟ್ಟಗುಣಗಳನ್ನೆಲ್ಲಾ ಸರ್ವನಾಶ ಮಾಡಬೇಕಿತ್ತು. ಆದರೆ ಮಾಡುವವರು ಯಾರು? ಅದನ್ನೆಲ್ಲಾ ಮಾಡಬೇಕಿದ್ದ ನನ್ನಪ್ಪ, ಸ್ಕೂಲಿನ ಹೆಚ್.ಎಮ್ ಎಲ್ಲರೂ ಕೈ ಕೊಟ್ಟರು. ನಾನು ನಿಸ್ಸಹಾಯಕನಾದೆ. ಅಪ್ಪನಿಲ್ಲದೆ ಮಾರನೇ ದಿನ ಶಾಲೆಗೆ ಹೋದರೆ ಅವನು ನನ್ನನ್ನು ಆಡಿಕೊಳ್ಳದೇ ಬಿಡುವುದಿಲ್ಲ. ಈಗೇನು ಮಾಡೋದು? ಸ್ಕೂಲಿಗೆ ಪ್ರೇಯರ್ ಮೊದಲೆ ಹೋಗಿ ಕ್ಲಾಸ್ ಲಿ ಕೂತುಬಿಡ್ಲಾ, ಅವನಿಗೆ ಎಲ್ಲೂ ಕಾಣಿಸದ ಹಾಗೆ? ಸಂಜೆ ಹೋಗಬೇಕಾದ್ರೂನು ಎಲ್ಲರೂ ಹೋದಮೇಲೆ ಹೋಗ್ತೀನಿ. ಅಷ್ಟೇ. ಹಾಗೆ ಮಾಡ್ತೀನಿ ಎಂದು ರಾತ್ರಿ ನಿರ್ಧರಿಸಿ ಮಲಗಿದೆ.


ಬೆಳಗ್ಗೆ ಎದ್ದಾಗ ಒಂದು ಆಶ್ಚರ್ಯ ಕಾದಿತ್ತು. ಅಪ್ಪ ಇದನ್ನ ಗಂಭೀರವಾಗಿ ಪರಿಗಣಿಸಿದ್ರು. ಮುಖದ ಮೇಲೆ ಅಲ್ಲಿ ಇಲ್ಲಿ ಇದ್ದ ಕೊಂಚ ಕೂದಲುಗಳನ್ನೆಲ್ಲಾ ತೆಗೆದು, ಮೀಸೆಯ ಜಾಗದಲ್ಲಿರುವ ಚಿಕ್ಕ ಚಿಕ್ಕ ಕೂದಲುಗಳು ಎದ್ದು ಕಾಣುವ ಹಾಗೆ ಶೇವ್ ಮಾಡಿದ್ದರು. ಹ್ಹಾ.. ಹ್ಹಾ… ಅಪ್ಪ ಅದನ್ನ ನನಗಿಂತ ಬಹಳ  ಗಂಭೀರವಾಗಿ ಪರಿಗಣಿಸಿದ್ರು. 'ಹಾಂ.. ನನಗೆ ಮೀಸೆ ಇಲ್ಲ ಅಂದಿದ್ನಲ್ಲ. ಈಗ ಮೀಸೆ ಇದೆ ನಡಿ. ಯಾರವ್ನು ತೋರಿಸು' ಅಂತ ನನ್ನ ಕಣ್ಣಲ್ಲಿ ಕಣ್ಣಿಟ್ಟು ಹೇಳಿದ್ರು. ನನಗೆ ಖುಷಿಯಾಗ್ಲಿಲ್ಲ, ಜೋರು ನಗು  ಬರ್ತಿತ್ತು. ಅಪ್ಪ ಎಲ್ಲಿ ಶಾಲೆಗೆ ಬಂದು ಬಿಡ್ತಾರೋ ಅಂತ  ಭಯ  ಕೂಡ  ಆಯ್ತು. ಅಪ್ಪ ಚಾರ್ಲಿ ಚಾಪ್ಲಿನ್ ನ ಹಾಗೆ ಕಾಣಿಸ್ತಿದ್ರು. ಹಾಗೆ ಕಾಣ್ಸಿದ್ರೆ ಸ್ಕೂಲಲ್ಲಿ ನನ್ನ ಇನ್ನೂ ಆಡ್ಕೊತಾರೆ ಅನ್ನೋ ಭಯಕ್ಕೆ, ಅಪ್ಪ ಬೇಡ, ತೆಗೆದು ಬಿಡೀ ಪ್ಲೀಸ್ ಎಂದು ಕೇಳಿದೆ. ಅಮ್ಮ, ಅಕ್ಕ ಇಬ್ಬರೂ ಜೋರಾಗಿ ನಗಲಿಕ್ಕೆ ಶುರು ಮಾಡಿದ್ರು. ಅಪ್ಪ ಕೇಳಲಿಲ್ಲ. 'ಇಲ್ಲ, ಇಲ್ಲ ನಡಿ. ಅವ್ನ್ಯಾರು ತೋರಿಸು' ಅಂತ  ನನ್ನ ಬಿಡಲಿಲ್ಲ. ನನಗೆ ಇನ್ನೂ ಹೆಚ್ಚಿನ ಮುಜುಗರವಾಯ್ತು. ಅಪ್ಪನನ್ನ ಶಾಲೆಗೆ ಕರಕೊಂಡು ಹೋಗದೆಯೇ ಆಗೋ ಅವಮಾನವೇ ಏಷ್ಟೋ ಪರ್ವಾಯಿರ್ಲಿಲ್ಲ ಅಂತ ಅನ್ನಿಸೋಕ್ಕೆ ಶುರುವಾಯ್ತು. ಇನ್ನು ಅವನು ನನ್ನ ಜನ್ಮೇಪಿ ಆಡ್ಕೊಳ್ತಲೇ ಇರ್ತಾನೆ ಅನ್ನಿಸ್ತು. ಅಪ್ಪ ಬಿಡಲಿಲ್ಲ. ಕೆಳಗೆ ಹೊರಡ್ಲಿಕ್ಕೆ ಬಂದಾಗ, ಕೆಳಗಿನ ಮನೆಯ ಅಕ್ಕಳೂ ಸಹ  ಅಪ್ಪನನ್ನ ನೋಡಿ 'ಕಿಸಕ್' ಅಂತ  ನಕ್ಬಿಟ್ಳು. ಅಪ್ಪನ್ನ ಯಾರೂ ಯಾವತ್ತೂ ಹಾಗೆ ನೋಡಿದ್ದಿರಲಿಲ್ಲ. ನನಗೇ ಇನ್ನೂ ಮುಜುಗರವಾಯ್ತು ಮತ್ತೆ ಖಚಿತವಾಗಿಹೋಯ್ತು, ಅಪ್ಪ ಚಂದ ಕಾಣ್ತಿಲ್ಲ ಅಂತ.

ಇಬ್ಬರೂ ಹೆಡ್.ಮೇಡಂ ಚೇಂಬರ್ ಒಳಗೆ ಬಂದ್ವಿ. ಹೆಚ್.ಎಂ ಗೆ ಸಹ ನಗು ಬಂದ್ರೂ, ತಡಕೊಂಡಿದದ್ರು. ಆದ್ರೂ ಅಷ್ಟಾಗಿ ತಡಿಲಿಕ್ಕಾಗದೇ ನಕ್ಕಿಬಿಟ್ರು. ಅವ್ರಿಗೆ ಗೊತ್ತಾಗೋಯ್ತೇನೋ ಇದ್ಕಾಗಿಯೇ ಅಪ್ಪ ಮೀಸೆ ಬಿಟ್ರು ಅಂತ. ಅವರಿಗೂ ನನ್ನ ಮೇಲೆ ಕನಿಕರ



ಬಂದಿರಬೇಕು. ಅವ್ರಿಗೆ ಮೊದಲಿಂದಲೂ ನನ್ನ ಮೇಲೆ ಸ್ವಲ್ಪ ಅನುಕಂಪ. ಅಪ್ಪನ್ನ ಕೂರಿಸಿ ಆ ಹುಡುಗನ್ನ ಕರೆಸಿದ್ರು. ಅವನು ಭಯದಲ್ಲೇ ಒಳಗೆ ಬಂದು ನಿಂತ. ಆಹಾ! ನನಗೆ ಎಂತೋ ಆನಂದ ಆಗ. 'ಗಂಡಸಾಗಿದ್ರೆ ಯಾಕೆ ಹೆದರ್ಕೋತೀಯ..' ಅಂತ ಕೇಳೋ ವಿಕೃತತೆ ಮನಸ್ಸಲ್ಲಿ ಮೂಡಿತು. ಹೆಚ್.ಎಂ ಆ ಹುಡುಗನ ಕಡೆ ತಿರುಗಿ - 'ನೋಡು ಅವರ ಅಪ್ಪ ಬಂದಿದಾರೆ. ನೀನು ಹೇಳಿದ ಪರಿಣಾಮ, ಬಹಳ ಘೋರವಾದ ಪ್ರಯತ್ನಕ್ಕೆ ಕೈ ಹಾಕಿ, ತಮ್ಮ ಮುಖದ ಬಗ್ಗೆಯೂ ತಲೆ ಕೆಡಿಸ್ಕೊಳ್ದೇ ಮೀಸೆ ಬಿಟ್ಟಿದ್ದಾರೆ'. ಇಷ್ಟು ಹೇಳೊ ಅಷ್ಟ್ರಲ್ಲಿ ಆ ಹುಡುಗನ ಕಣ್ಣಲ್ಲಿ ನೀರು ತುಂಬಿಕೊಳ್ತು. 'ಇನ್ನೆಂದೂ ಹೀಗೆ ಮಾಡ್ಬೇಡ ಹೋಗು' ಎಂದು ಕಳಿಸಿದ್ರು. ನನಗೆ ಮನಸ್ಸಲ್ಲೇ ಒಂದು ರೀತಿಯ ಸಂತೃಪ್ತಿ. ನಮ್ಮಪ್ಪನ ಸ್ಥಿತಿಯನ್ನ ನೋಡಿ ಇವನಿಗೆ ಬೇಸರವಾಗಿ ಅತ್ತು ಹೋದ ಅಂತ. ಆದರೆ ಆಮೇಲೆ ತಿಳಿಯಿತು ಮೇಡಂ ಆ ಹುಡುಗನನ್ನ ಕರೆಸಿ ಹೊಡೆದಿದ್ರು ಅಂತ. ಇನ್ನೆಲ್ಲಿ ಹೊಡೆದು ಬಿಡ್ತಾರೋ ಅಂತ ಮುಂಚೆಲೇ ಆತ ಅಳೋ ನಾಟಕ ಮಾಡಿದ್ದು ಅಂತ. ಅದಾದಮೇಲೆ ಆತ ಎಂದೂ ನನ್ನ  ತಂಟೆಗೇ ಬಂದಿಲ್ಲ. ನನ್ನ ಮಾತಾಡಿಸಿದ್ದೂ ಇಲ್ಲ, ಹೊಡೆತದ ಭಯಕ್ಕೆ.

ಅಪ್ಪನಿಗೆ ಹೊಗಳಿದ್ರೋ ತೆಗಳಿದ್ರೋ ಅರ್ಥವಾಗ್ಲಿಲ್ಲ. ಆಫೀಸಿಗೆ ತಡವಾಯ್ತು ಅಂತ ನಮಸ್ಕರಿಸಿ ಎದ್ದು ಬಂದ್ರು. ಮಾರನೆಯ ದಿನಕ್ಕೆ ಅಪ್ಪನ ಒಂದು ದಿನದ ಮೀಸೆ ಹೋಗಿತ್ತು.



# GROWING UP

NARASIMHA MURTHY S V

**We grew up loving ideas, people and things.**
**Ideas can be embraced but**
**May not be practically possible in a family**
**To practice, but**
**Only to preach……..**
**Loving a person is natural.**
**But being loved by the same person is**
**The greatest gift**
**Which many are not fortunate.**
**Expectation always surges ahead with the**
**Love of material things.**
**There is a yawning gap between**
**Desire and unfulifillment.**
**Obsession creeps in at the corners of mind,**
**We are weak with age, they**
**Start reappearing on the threshold**
**And we are labelled as insane for being**
**True to ourselves.**
**So, have desires that can be culminated,**
**Love people who love you**
**Love the things which you have**
**Let’s fall in love with**
**TODAY.**

# ಸವಿನೆನಪಿನ ನವಿಲುಗರಿ

ರಾಘವೇಂದ್ರ ಹೇರ್ಳೆ, ಜಿ. ಬೆಂಗಳೂರು

ಮೊಗೆದಷ್ಟೂ ನೆನಪು.....

ಹೊರಳುನೋಟ ಬೀರಿದರೆ ಅದೆಂಥ ಆಡುಂಬೊಲ !

ಒಂದಿಷ್ಟು ಕೇಕೆ, ಕಲ್ಲು ಕರಗಿಸುವ ರಣೋತ್ಸಾಹ

ಚಪ್ಪಾಳೆ, ಬತ್ತಾಸು, ಚಿನ್ನಿದಾಂಡುಗಳ ನಡುವೆ ಮುಗಿಲು ಮುಟ್ಟಿದ ಸ್ನಿಗ್ಧ ನಗು.

ಶಾಲೆಗಳೆಂಬ ಗೋಡೆಗಳ ನಡುವೆ, ಆಟದಬಯಲ ತುಂಬ ಕರಾಮತ್ತಿನ ಬಣ್ಣದ ಲೋಕ

ಮನೆಯೊಳಗೆ ಒಡಹುಟ್ಟಿದವರ, ಹೆತ್ತವರ  ಎರಕ ಹೊಯ್ದ ಪ್ರೀತಿಯ ಮೆರವಣಿಗೆ

ಗೊತ್ತುಗುರಿಯಿಲ್ಲದ ಮುಗ್ಧ ಮನಸುಗಳ ಅನಂತ ಕನಸುಗಳ ಬೆಸುಗೆ

ತಾನುಂಟು ಮೂರುಲೋಕವುಂಟೆಂಬ ಪಾದರಸದ ಚುರುಕಿಗೆಲ್ಲಿ ಕೊನೆ ?

ಕ್ಷುದ್ರ ಭಾವಗಳ ಸೋಂಕೂ ಇಲ್ಲದ ಪವಿತ್ರ ವಾತ್ಸಲ್ಯದ ಒರತೆ

ಮರಳಬಾರದೆ ನಾನು ಆ ಬಾಲ್ಯದ ಬನಿಯೊಳಗೆ ತಂಗಾಳಿಯಂತೆ ??

ಊರ ಮಂದಿಯ ಒಲವಿನಾಸರೆ

ನೆರೆಹೊರೆಯಲ್ಲಿನ ಸಲುಗೆ ಸಲ್ಲಾಪ,

ಬಂಧು ಬಳಗದವರ ಕೊಂಡಾಟದ ಹೂನಗೆಯ ಗೊಂಚಲು,

ರಕ್ತಸಂಬಂಧಿಗಳ ನಿರ್ವ್ಯಾಜ ಆಪ್ತಭಾವದ ಪರಮಸುಖ,

ಅಧ್ಯಾಪಕರ ನಿಷ್ಠುರತೆಯ ನಡುವೆ ಸದ್ದಿಲ್ಲದೆ ಮಿಡಿಯುವ ಆರ್ದ್ರತೆ

ಒಡೆಯ–ಒಕ್ಕಲು ಭೇದವಿಲ್ಲದ, ಕುಲಗೋತ್ರಗಳ ನೆಪವಿಲ್ಲದ

ಜಾತಿ ಮತಗಳ ಕಟ್ಟುಬೀಳದ, ನಡೆನುಡಿಯ ತರತಮವಿಲ್ಲದ

ಅಬೋಧ ಕಂಗಳಲಿ ಸದಾ ಸೂಸುವ ವಿಶ್ವಮಾನವಪ್ರಜ್ಞೆ,

ತೆರೆದ ಪುಸ್ತಕದಂಥ, ಸ್ಫಟಿಕ ಸದೃಶ ಪಾರದರ್ಶಕ ನೋಟ

ಮರಳಬಾರದೆ ನಾನು ಆ ಬಾಲ್ಯದ ಬನಿಯೊಳಗೆ ತಂಗಾಳಿಯಂತೆ ??

ಆಷಾಢಭೂತಿತನವಿಲ್ಲ; ದೇಶಾವರಿ ನಗೆಯ ಹಳಹಳಿಕೆಯಿಲ್ಲ

ಇಗೋ, ಇಸಮ್ಮುಗಳ ಸೋಗಲಾಡಿತನವಿಲ್ಲ; ಹುಸಿಪ್ರತಿಷ್ಠೆಗೆ ಜೋತುಬೀಳಬೇಕಿಲ್ಲ

ಕೊಡುಕೊಳ್ಳುವ ಲೆಕ್ಕಾಚಾರದ ಮಸಲತ್ತುಗಳಿಲ್ಲ; ಗುಲಾಮಗಿರಿಯ ಹಂಗಿಲ್ಲ

ಗೋಸುಂಬೆತನದ ಅಂಕಿತಕಿಲ್ಲಿ ಜಾಗವಿಲ್ಲ; ದ್ವೇಷ–ಮತ್ಸರಗಳ ವಿಕೃತಿಗಳಿಲ್ಲ

ಹೆಣ್ಣು ಹೆಂಡ, ಧನಕನಕಗಳ ತೆವಲುಗಳಿಲ್ಲ; ಪ್ರಶಸ್ತಿ, ಹಾರ ತುರಾಯಿಗಳ ಹಕೀಕತ್ತಿಲ್ಲ

ಕಾಲೆಳೆಯುವ ಶಕುನಿಬುದ್ಧಿಯಿನಿತೂ ಇಲ್ಲ; ವಿಘ್ನ ಸಂತೋಷದ ಅರ್ಥ ಗೊತ್ತಿಲ್ಲ

ಗೋಮುಖ ವ್ಯಾಘ್ರತನದ ಸಂಗವಿಲ್ಲವೇ ಇಲ್ಲ; ಸ್ವಾರ್ಥ–ಲೋಲುಪತೆಗಳ ಅರಿವಿಲ್ಲ

ಹಲ್ಲುಗಿಂಜುವ ಪ್ರಮೇಯವಿಲ್ಲ; ಸಮಯಸಾಧಕತನವು ಮೊಳಕೆಯೊಡೆಯುವುದಿಲ್ಲ

ಅಧಿಕಾರ–ಅಂತಸ್ತುಗಳ ಆಟೋಪಗಳಿಲ್ಲ; ಆತ್ಮರತಿಯ ಗೀಳು ಹತ್ತಿರ ಸುಳಿಯುವುದಿಲ್ಲ

ಮರಳಬಾರದೆ ನಾನು ಆ ಬಾಲ್ಯದ ಬನಿಯೊಳಗೆ ತಂಗಾಳಿಯಂತೆ ??

ಕಾಲ ಕಾಯುವುದೇ ? ಸವೆದ ದೇಹ ಮತ್ತೆ ಕೊನರುವುದೇ?

ಬತ್ತಿದ ಜೀವಸೆಲೆ ಮತ್ತೆ ಒಸರುವುದೇ?

ವರ್ಣಮಯ ಚಿತ್ತಾರದ ನೆನಪಿನ ನವಿಲುಗರಿ ಮತ್ತೆ ಮರಿ ಹಾಕುವುದೇ ?

ಅಲ್ಪಮಾನವತೆಯ ಕೆಸರಿನಲ್ಲಿ ಮತ್ತೆ ವಸುಧೈವ ಕುಟುಂಬದ ಕಮಲ ಅರಳುವುದೇ?

ನಾನೆಂಬ ಅಫೀಮಿನ ಅಮಲಿನಲಿ ಪರತತ್ವದ ಹೊಳಹು ನಕ್ಷತ್ರವಾಗುವುದೇ?

ನಂಜಿನಗೊರಳು ಬರಿದಾಗಿ ಸೌಹಾರ್ದದ ಅಮೃತಪಾನಕೆ ಅಂಜಲಿಯಾಗುವುದೇ?

ಹಿಂಸೆ–ಕ್ರೌರ್ಯಗಳ ರುದ್ರನರ್ತನ ನಿಂತು ಮಗುವಿನ ತೊದಲನುಡಿ ಅನುರಣಿಸುವುದೇ?

ಕ್ಲೇಶ–ಒತ್ತಡಗಳು ಆವಿಯಾಗಿ ಶಾಂತಿ ಸುಭಿಕ್ಷೆಗಳ ಮೇಘವರ್ಷಿಣಿಯಾಗುವುದೇ?

ಒಳಗಿನ ಬೇಗುದಿಗಳು ಅಡಗಿ, ಹೊರಗಿನ ಭ್ರಮೆಗಳ ಕಳಚಿ ನಗ್ನಸತ್ಯದ ದರ್ಶನವಾಗುವುದೇ ?

ಮರಳಬಾರದೆ ನಾನು ಆ ಬಾಲ್ಯದ ಬನಿಯೊಳಗೆ ತಂಗಾಳಿಯಂತೆ ??

ಕಾಯುತ್ತೇನೆ.. ಕರಗುತ್ತೇನೆ... ಹುಚ್ಚರ ಸಂತೆಯ ಸರಕಿನಲಿ ಹಾಗೇ ಸುಮ್ಮನೆ !!!



# ಸಮುದಾಯ ಅಭಿವೃದ್ಧಿ ಮಾದರಿ

ಡಾ. ಶೌರೀಶ್ ಕುದ್ಕುಳಿ

'ಸಮುದಾಯ' ಹಾಗೂ 'ಅಭಿವೃದ್ಧಿ' ಎನ್ನುವ ಪಾರಿಭಾಷಿಕ ಪದಗಳು ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಚರ್ಚೆಗೀಡಾಗುತ್ತಿವೆ. ಆದರೆ ಈ ಪದಪುಂಜಗಳು ಇತ್ತೀಚಿಗೆ ಹುಟ್ಟಿಕೊಂಡಂತಹವುಗಳಲ್ಲ. ಸಮುದಾಯ ಮತ್ತು ಅದರ ಅಭಿವೃದ್ಧಿ ಎಂಬ ಪರಿಕಲ್ಪನೆಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ಇತ್ತು ಎಂಬುದು ಗಮನಾರ್ಹ. ಹಲವು ಆಯಾಮಗಳನ್ನು ಹೊಂದಿರುವ ಸಮುದಾಯ, ಸಮಾಜದ ವಿವಿಧ ಸ್ತರಗಳ ಸಮಷ್ಟಿಯ ಚಿಂತನೆಯನ್ನು ಹೊಂದಿತ್ತು. ಸಮಾಜವೆಂಬ ಸಮಷ್ಟಿಯ ಪರಿಕಲ್ಪನೆಯಲ್ಲಿ ಹಲವು ಜನಾಂಗಗಳು ಕಂಡುಬರುತ್ತವೆ. ಅನಾದಿಕಾಲದಿಂದಲೂ ಇಂತಹ ಜನಾಂಗಗಳು ತಮ್ಮದೇ ಆದ ಜಾತಿ, ಮತ, ಧರ್ಮ, ಸಾಮಾಜಿಕ ಕಟ್ಟುಪಾಡುಗಳು, ಸಂಸ್ಕೃತಿ ಇವೇ ಮೊದಲಾದುವುಗಳನ್ನು ಆಚರಿಸಿಕೊಂಡು ಬಂದಿವೆ. ಅಂದರೆ ಜೀವನ ಶೈಲಿ ಅಥವಾ ಜೀವಿಸುವ ಕ್ರಮದಲ್ಲಿ ಸಾಮಾಜಿಕವಾಗಿ ವೈವಿಧ್ಯತೆಯನ್ನು ಆಚರಿಸಿಕೊಂಡು ಬಂದಿರುವುದನ್ನು ನಾವು ಕಾಣಬಹುದು. ಇದು ಸಂಪ್ರದಾಯ ಅಥವಾ ರೂಢಿಗಳಾಗಿ ಕರೆಸಿಕೊಳ್ಳುತ್ತಿತ್ತು. ಅಂದರೆ ವಿವಿಧ ಜನಾಂಗಗಳ, ವಿವಿಧ ಭಾಷೆಗಳ ಹಾಗೆಯೇ ವಿವಿಧ ಜಾತಿ, ಮತ, ಧರ್ಮಗಳ ಜನಸಮುದಾಯ ಒಂದು ಸಾಮಾಜಿಕ ಪರಿಧಿಯ ವ್ಯವಸ್ಥೆಯೊಳಗೆ ಜೀವಿಸುತ್ತಿರುವ ವ್ಯವಸ್ಥೆಯನ್ನು 'ಸಮಾಜ' ಹಾಗೂ ಅಲ್ಲಿಯ ವಿವಿಧ ಬಗೆಯ ಜನವರ್ಗವನ್ನು 'ಸಮುದಾಯ' ಎಂದು ಗುರುತಿಸಲಾಗುತ್ತದೆ. ಆದರೆ ಆಧುನಿಕ ಕಾಲಘಟ್ಟದಲ್ಲಿ, 'ಸಮುದಾಯ' ಎಂಬುದು ಯಾವುದೇ ಜನಾಂಗಕ್ಕೆ ಮೀಸಲಾಗದೆ ಎಲ್ಲಾ ಮತ-ಧರ್ಮದವರ ಮತ್ತು ಜನಾಂಗಗಳ ಒಂದು ಸಮಗ್ರ ದೃಷ್ಟಿಯನ್ನು ಹೊಂದಿದೆ ಮತ್ತು ಆ ಮೂಲಕವೇ 'ಸಮುದಾಯ' ಅಥವಾ 'ಜನಸಮುದಾಯ' ಇಂದು ಗುರುತಿಸಿಕೊಳ್ಳುತ್ತಿದೆ. ವೈವಿಧ್ಯತೆಯಲ್ಲಿಯೂ ಭಿನ್ನತೆಯನ್ನು ಹೊಂದಿರುವ ಭಾರತದ ಇಂದಿನ 'ಸಮಾಜ'ವೇ ಅಭಿವೃದ್ಧಿಯ ಭಾಷೆಯಲ್ಲಿ 'ಸಮುದಾಯ'ವಾಗಿ ಪ್ರಚಲಿತದಲ್ಲಿದೆ. ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಒಂದು ಸಮಗ್ರ ಚಿತ್ರಣವನ್ನು ಮತ್ತು ಅದರ ಬೇಕು ಬೇಡಗಳನ್ನು ಈ ಸಮುದಾಯ ಹೊರಹಾಕುತ್ತದೆ. ಸ್ವತಂತ್ರ ಭಾರತದಲ್ಲಿ ಸಂವಿಧಾನರೀತ್ಯ ಒಪ್ಪಿಕೊಂಡಿರುವ ಜಾತ್ಯಾತೀತ, ಧರ್ಮಾತೀತ ಎಂಬಿತ್ಯಾದಿ ಮೂಲಭೂತ ಅಂಶಗಳಿಗೆ ಪೂರಕವಾಗಿಯೇ ಸಮುದಾಯದ ಕಲ್ಪನೆಯೂ ರೂಪುಗೊಂಡಿದೆ.

ಸಮುದಾಯದ ವ್ಯಾಖ್ಯೆ, ವ್ಯಾಪ್ತಿ ಮತ್ತು ಅದರ ಅಬಿವೃದ್ಧಿಯ ಬಗೆಗೆ ಹಲವು ವಿದ್ವಾಂಸರುಗಳು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಕೆಲವರು ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಅಭಿವೃದ್ಧಿಯ ಬಗೆಗೆ ಗ್ರೀಕ್ ತತ್ವಜ್ಞಾನಿಯಾದ ಅರಿಸ್ಟಾಟಲ್, ಅರ್ಥಶಾಸ್ತ್ರಜ್ಞರಾದ ಆಡಮ್‌ಸ್ಮಿತ್, ಇಮ್ಯಾನುಯಲ್ ಕಾಂತ್, ಕಾರ್ಲ್ ಮಾರ್ಕ್ಸ್ ಮತ್ತು ೧೯-೨೦ನೇ ಶತಮಾನದ ಆರ್ಥಿಕ ತಜ್ಞರು ನೀಡಿದ ವಿವರಣೆಗಳು ನೀತಿ ನಿರೂಪಕರಿಗೆ ಸಹಕಾರಿಯಾಯಿತು. ಆದರೆ ಅವರು ನೀಡಿದ ವಿವರಣೆಗಳು ಆರ್ಥಿಕ ಅಭಿವೃದ್ಧಿಗೆ ಮಾತ್ರವೇ ಒತ್ತು ನೀಡಿತ್ತು ಎಂಬುದು ಇಲ್ಲಿ ಗಮನಾರ್ಹವಾಗುತ್ತದೆ. ಭಾರತದ ಸಮಾಜ ಅಥವಾ ಸಮುದಾಯದ ಪರಿಕಲ್ಪನೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ವಿಭಿನ್ನವಾಗಿ ಗೋಚರಿಸುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳ ವಿದ್ವಾಂಸರುಗಳು ತಾವು ಕಂಡುಕೊಂಡ ಸತ್ಯಾಂಶಗಳನ್ನು (ಮಾದರಿಗಳು) ಭಾರತದ ಸಮುದಾಯಗಳ ಅಭಿವೃದ್ಧಿಗೆ ಅಳವಡಿಸಲು ಕಷ್ಟಸಾಧ್ಯ. ಏಕೆಂದರೆ ನಮ್ಮ ದೇಶ ಒಂದು ಸಂಕೀರ್ಣವಾದ ಸಮಾಜ ವ್ಯವಸ್ಥೆಯನ್ನು ಹೊಂದಿದೆ. ಹಲವು ಜಾತಿ, ಧರ್ಮ, ಪಂಥಗಳ ಅಸ್ತಿತ್ವ, ಸಮಾಜದಲ್ಲಿನ ಸಾಮಾಜಿಕ ಕಟ್ಟುಪಾಡುಗಳು, ಆಚರಣೆಗಳು, ರೂಢಿಗಳು ಇಂದಿಗೂ ಬಹು ಎತ್ತರದ ಸ್ಥಾನದಲ್ಲಿ

ಆಚರಿಸಲ್ಪಡುತ್ತಿದೆ. ಇದನ್ನೇ ದೇಶದ 'ಸಾಂಸ್ಕೃತಿಕ ನೆಲೆಗಟ್ಟು' ಎಂಬುದಾಗಿಯೂ ಗುರುತಿಸಲಾಗುತ್ತದೆ. ಹೀಗೆ ಉನ್ನತವಾಗಿ ಪ್ರತಿಬಿಂಬಿತವಾಗುತ್ತಿರುವ ಭಾರತೀಯ ಸಂಸ್ಕೃತಿಯನ್ನು ಪರಿಗಣಿಸಿಕೊಂಡೇ ಇಲ್ಲಿ ಸಮುದಾಯಗಳ ಅಭಿವೃದ್ಧಿಯಾಗಬೇಕಿದೆ. ಇದು ಒಂದು ತೆರನಾಗಿ ಹಗ್ಗದ ಮೇಲೆ ಸರ್ಕಸ್ ಮಾಡಿದಂತೆ..! ಭಾರತದ ಯೋಜನಾ ಆಯೋಗ ಮತ್ತು ರಾಜ್ಯ ಯೋಜನಾ ಆಯೋಗಗಳು ಈ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಬೇಕಾಗಿರುವುದು 'ಅಭಿವೃದ್ಧಿ'ಯ ವ್ಯಾಖ್ಯಾನವನ್ನು ಬೇರೆ ರೀತಿ ಅರ್ಥೈಸುವಂತೆ ಮಾಡಿದೆ. ಇದು ಸಮಸ್ಯಾತ್ಮಕವೂ ಹೌದು. ತ್ರಾಸದಾಯಕವೂ ಹೌದು. ಆದರೆ ಯೋಜನೆಗಳು ಸಮಗ್ರ ದೃಷ್ಟಿಕೋನದಿಂದ ಸರ್ವರ ಅಭ್ಯುದಯವನ್ನು ಮಾಡಬೇಕಾಗಿರುವುದರಿಂದ ಆ ನಿಟ್ಟಿನಲ್ಲಿ ನೀತಿ ನಿರೂಪಕರು ಕೆಲಸ ಮಾಡುತ್ತಿರುವುದು ಕಂಡುಬರುತ್ತಿದೆ.





ಸಮುದಾಯ ಅಭಿವೃದ್ಧಿ ಪರಿಕಲ್ಪನೆ

ದೇಶದ ಹೆಚ್ಚಿನ ಸಮುದಾಯವು ಕೃಷಿಯನ್ನೇ ನಂಬಿರುವುದರಿಂದ ಯೋಜನೆಗಳನ್ನು ರೂಪಿಸುವವರಿಗೆ ಸೂಕ್ತವಾದ ಮಾದರಿಗಳು ಅಗತ್ಯವಾಗಿರುತ್ತವೆ. ಅಲ್ಲದೇ ನಮ್ಮ ಸಂಕೀರ್ಣ ಸಮಾಜ ವ್ಯವಸ್ಥೆಯನ್ನು ಗಮನಿಸಿ ಯೋಜನೆಗಳು ರೂಪುಗೊಳ್ಳಬೇಕಾಗುತ್ತವೆ. ಈ ನಿಟ್ಟಿನಲ್ಲಿ ಸಮುದಾಯದ ಅಭಿವೃದ್ಧಿ ಎಂದರೇನು ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. 'ಸಮುದಾಯ ಅಭಿವೃದ್ಧಿ' ಎನ್ನುವುದು ಒಂದು ಪ್ರಕ್ರಿಯೆಯಾಗಿದ್ದು, ಆ ಸಮುದಾಯದ ಹಳೆಯ ಜೀವನ ಶೈಲಿಯ ವಿಧಾನವನ್ನು ಉತ್ತಮ ಜೀವನ ಶೈಲಿಗೆ ಪರಿವರ್ತಿಸುವುದು ಎಂಬುದಾಗಿ ಅರ್ಥೈಸಿಕೊಳ್ಳಬಹುದು. ಈ ರೀತಿಯಾಗಿ ಜೀವನ ಮಟ್ಟವನ್ನು

ಉತ್ತಮಗೊಳಿಸುವ ಪ್ರಕ್ರಿಯೆಯಲ್ಲಿ ಆರ್ಥಿಕ ಸಂಪನ್ಮೂಲವನ್ನು ಬಳಸಿಕೊಳ್ಳಲಾಗುತ್ತದೆ ಅಥವಾ ಹೂಡಲಾಗುತ್ತದೆ. ಈ ಸಂಪನ್ಮೂಲಗಳ ಮುಖೇನ ಕಾರ್ಯಕ್ರಮಗಳನ್ನು ಜಾರಿಮಾಡಿ, ಜನಸಾಮಾನ್ಯರ ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತದೆ. ಕೆಲವೊಂದು ಬಾರಿ ಆಂದೋಲನವಾಗಿಯೂ ಇದು ರೂಪವನ್ನು ಪಡೆದುಕೊಳ್ಳುತ್ತದೆ (ಉದಾಹರಣೆಗೆ: ಸಂಪೂರ್ಣ ಸ್ವಚ್ಛತಾ ಆಂದೋಲನ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶೇ. ೧೦೦ರಷ್ಟು ಮನೆಗಳಿಗೆ ಶೌಚಾಲಯದ ನಿರ್ಮಾಣ). ಆದರೆ ಸಮುದಾಯ ಅಭಿವೃದ್ಧಿ ಎನ್ನುವುದು ಒಂದು ನಿರ್ದಿಷ್ಟ ಆಶಯ ಅಥವಾ ಮೌಲ್ಯವನ್ನು ಹೊಂದಿದ ಯೋಜನೆಯನ್ನು ಅಳವಡಿಸಿಕೊಳ್ಳುತ್ತದೆ.

ಮಹಾತ್ಮಾ ಗಾಂಧಿ ಹಾಗೂ ರವೀಂದ್ರನಾಥ ಟಾಗೂರ್ ಅವರುಗಳು ಈ ದೇಶದ ಅಭಿವೃದ್ಧಿಯ ಬಗೆಗೆ ಮಹೋನ್ನತವಾದ ಆಶಯವನ್ನು ಇಟ್ಟುಕೊಂಡವರು. ಹಳ್ಳಿಗಳ ಉದ್ಧಾರವಾಗದೆ ದೇಶದ ಉದ್ಧಾರವಾಗದು ಎಂಬ ಪರಿಕಲ್ಪನೆಗೆ ಹೆಚ್ಚು ಒತ್ತು ನೀಡಿದ ಅವರು ಈ ದೇಶ ಕಂಡ ಮಹಾಚಿಂತಕರು. 'ಸಮುದಾಯದ ಅಭಿವೃದ್ಧಿಯನ್ನು ಸಮುದಾಯದಲ್ಲಿ ಸ್ವ–ಸಹಾಯ, ಆತ್ಮ ವಿಶ್ವಾಸ ಎಂಬ ಅಂಶಗಳನ್ನು ಪ್ರೋತ್ಸಾಹಿಸುವ ಮೂಲಕ ರಚನಾತ್ಮಕ ಚಟುವಟಿಕೆಗಳನ್ನು ಉತ್ತೇಜಿಸಬಹುದು ಮತ್ತು ಆ ಅಭಿವೃದ್ಧಿ ಸಾಧ್ಯ' ಎಂಬುದನ್ನು ಒತ್ತಿ ಹೇಳುತ್ತಾರೆ. ಕೃಷಿ, ಗ್ರಾಮೀಣ ಕೈಗಾರಿಕೆ, ಗ್ರಾಮ ಪಂಚಾಯತಿ ಮತ್ತು ಸಹಕಾರಿ ಸಂಘಗಳ ಮೂಲಕ ವಿಕೇಂದ್ರೀಕೃತ ಆರ್ಥಿಕ ಸಾಮಾಜಿಕ ವ್ಯವಸ್ಥೆಯನ್ನು ಹುಟ್ಟುಹಾಕಿ, ಜೀವನ ಮೌಲ್ಯವನ್ನು ಉತ್ತಮಗೊಳಿಸಿಕೊಳ್ಳಬಹುದು ಎಂಬ ಅಂಶಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಾರೆ.

ಅಭಿವೃದ್ಧಿಯ ಬಗೆಗೆ ಭಿನ್ನ ಭಿನ್ನ ಪರಿಕಲ್ಪನೆಗಳು ಸಮಾಜಮುಖಿ ಚಿಂತನೆಯಲ್ಲಿ ಹುಟ್ಟಿಕೊಂಡಿವೆ. ಜನಸಮುದಾಯದ ವಿವಿಧ ಸ್ತರಗಳ ಅಭಿವೃದ್ಧಿಯನ್ನು ಇಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. **'ಸಮುದಾಯ ಅಭಿವೃದ್ಧಿಯು'** ಸ್ಥಳೀಯ ಸಂಪನ್ಮೂಲದ ಬಳಕೆಗಾಗಿ ಜನಸಮುದಾಯವನ್ನು ಒಟ್ಟುಗೂಡಿಸಿ ಕೆಲಸವನ್ನು ಮಾಡುತ್ತದೆ ಮತ್ತು ಜನತೆಯನ್ನು ಈ ನಿಟ್ಟಿನಲ್ಲಿ ಜಾಗೃತಗೊಳಿಸುತ್ತದೆ. ಸ್ಥಳೀಯ ಸಂಪನ್ಮೂಲಗಳನ್ನು ಬಹು ಎಚ್ಚರಿಕೆಯಿಂದ ಬಳಸಿಕೊಳ್ಳುವಂತೆ ಅವರಲ್ಲಿ ಅರಿವನ್ನು ಮೂಡಿಸುತ್ತದೆ. ಆದರೆ **'ಆರ್ಥಿಕ ಅಭಿವೃದ್ಧಿಯು'** ಆರ್ಥಿಕ ಮಟ್ಟವನ್ನು ನಿರ್ವಹಿಸುತ್ತದೆ; ಪ್ರಗತಿ ಇಲ್ಲಿ ಅತ್ಯಗತ್ಯವೆನಿಸಿದರೂ, ಅದನ್ನು ವ್ಯವಸ್ಥಿತ ಯೋಜನೆಗಳ ಮೂಲಕ ಸಮತೋಲನವಾಗಿ ಕಾಪಾಡಿಕೊಳ್ಳುತ್ತದೆ. ಇದು ಕಲ್ಯಾಣ ಅರ್ಥವ್ಯವಸ್ಥೆಗೆ ಒತ್ತು ನೀಡುತ್ತದೆ.



**'ಸಾಮಾಜಿಕ ಅಭಿವೃದ್ಧಿಯು'** ಸಾಮಾಜಿಕ ಬದಲಾವಣೆಯ ಅಗತ್ಯತೆಯನ್ನು ಜನತೆಗೆ ಒತ್ತಿ ಹೇಳುತ್ತದೆ ಮತ್ತು ಈ ಬದಲಾವಣೆಗೆ ಸಹಕರಿಸುವಂತೆ ಜನರನ್ನು ಪ್ರೇರೇಪಿಸುತ್ತದೆ. ಅರಿವಿನ ಶಿಕ್ಷಣವನ್ನೂ ಇದು ಜನತೆಗೆ ನೀಡುತ್ತದೆ. ಅಭಿವೃದ್ಧಿಯು ಸಮುದಾಯವನ್ನು ಹೊರತುಪಡಿಸಿದಂತೆ ಅನುಷ್ಠಾನಗೊಳ್ಳುವಂತಿಲ್ಲ. ಸಮುದಾಯ ಮತ್ತು ಅದರ ಅಭಿವೃದ್ಧಿಯನ್ನು ಈ ಕೆಳಗಿನಂತೆ ಸ್ಪಷ್ಟೀಕರಿಸಿಕೊಳ್ಳಬಹುದು.

- ಸಮುದಾಯದಲ್ಲಿರುವ ವಿವಿಧ ಸ್ತರಗಳಲ್ಲಾಗುವ ಅಭಿವೃದ್ಧಿ ಪ್ರಮುಖವಾಗಿ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ರಂಗದಲ್ಲಾಗುವ ಸಮಗ್ರ ಅಭಿವೃದ್ಧಿಯನ್ನು ಸಮುದಾಯ ಅಭಿವೃದ್ಧಿ ಗುರುತಿಸುತ್ತಾರೆ.
- **ವಿಶ್ವಸಂಸ್ಥೆಯ ಪ್ರಕಾರ, 'ಸಮುದಾಯ ಅಭಿವೃದ್ಧಿಯೆಂಬುದು ಒಂದು ಪ್ರಕ್ರಿಯೆ. ಒಂದು ರಾಷ್ಟ್ರದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗಾಗಿ ಜನಸಮುದಾಯವು ತನ್ನ ಒಗ್ಗಟ್ಟಿನ ಪ್ರಯತ್ನವನ್ನು ಸರಕಾರಕ್ಕೆ ನೀಡುವ ಮೂಲಕ ಸಹಕರಿಸಬೇಕಾಗುತ್ತದೆ. ಈ ಸಮುದಾಯದ ಕೊಡುಗೆಗಳನ್ನು ಆಧರಿಸಿ ಆ ದೇಶದ ಸಮುದಾಯ ಅಭಿವೃದ್ಧಿ ನಿಂತಿದೆ ಮತ್ತು ಅದು ಒಂದು ರಾಷ್ಟ್ರದ ಬೆಳವಣಿಗೆಗೆ ಪೂರಕವಾಗಿರುತ್ತದೆ' ಎಂದು ಹೇಳುತ್ತದೆ.**
- ಭಾರತದ ಯೋಜನಾ ಆಯೋಗವು ಸಮುದಾಯ ಅಭಿವೃದ್ಧಿಯ ಕುರಿತು ಈ ರೀತಿ ವಿವರಿಸುತ್ತದೆ: 'ಸಮುದಾಯ ಅಭಿವೃದ್ಧಿಯೆಂದರೆ ಗ್ರಾಮೀಣ ಕಾರ್ಯಕ್ರಮಗಳ ವಿಸ್ತರಣೆ. ಈ ವಿಸ್ತರಣೆಯ ಮೂಲಕ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗೊಂಡ ಅಂಶಗಳನ್ನು ಆಧರಿಸಿ ಗ್ರಾಮದ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಯನ್ನು ಪ್ರಾರಂಭಿಸುವುದು'.
- **ಭಾರತ ಸರಕಾರ ಸಮುದಾಯ ಅಭಿವೃದ್ಧಿಯ ಬಗ್ಗೆ ತನ್ನ ವಿವರಣೆಯನ್ನು ಈ ರೀತಿ ನೀಡುತ್ತದೆ: 'ಸಮುದಾಯ ಅಭಿವೃದ್ಧಿ ಎನ್ನುವುದು ಜನತೆ ತಮಗೋಸ್ಕರ ಸ್ವ-ಸಹಾಯ ಮೂಲಕ ಯೋಜಿಸಿ ಜಾರಿಗೊಳಿಸುತ್ತಿರುವ ಕಾರ್ಯಕ್ರಮ. ಸರಕಾರ ಕೇವಲ ತಾಂತ್ರಿಕ ಮತ್ತು ಹಣಕಾಸಿನ ನೆರವನ್ನು ಮಾತ್ರ ಒದಗಿಸುತ್ತಿದೆ. ವ್ಯಕ್ತಿ ಹಾಗೂ ಗ್ರಾಮದ ಜನಸಮುದಾಯಗಳಲ್ಲಿ ಸ್ವಾತಂತ್ರ್ಯವನ್ನು ಉದ್ದೀಪನಗೊಳಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಸಾರ್ವಜನಿಕ ಸಂಸ್ಥೆಗಳಾದ ಪಂಚಾಯತಿ, ಸಹಕಾರ ಸಂಘ, ಯುವಕ-ಯುವತಿ ಮಂಡಲಗಳ ಮೂಲಕ ಸಾಮುದಾಯಿಕ ಚಿಂತನೆ ಮತ್ತು ಸಂಘಟನಾತ್ಮಕ ಸಹಕಾರ ತತ್ವಗಳು ಹುಟ್ಟಿಕೊಳ್ಳುತ್ತವೆ' ಎಂಬುದಾಗಿ ವಿವರಿಸುತ್ತದೆ.**

**ಸಮುದಾಯ ಅಭಿವೃದ್ಧಿಯ ವ್ಯಾಖ್ಯೆ**

ಸಮುದಾಯದ ಅಭಿವೃದ್ಧಿಯ ಕುರಿತು ಭಿನ್ನ ಭಿನ್ನವಾದ ವ್ಯಾಖ್ಯೆ ಹಾಗೂ ಅರ್ಥಗಳನ್ನು ನಾವು ಗಮನಿಸಬಹುದು. ಎಸ್. ರಂಗಸ್ವಾಮಿ ಅವರು ತಮ್ಮ ಗ್ರಾಮೀಣ ಸಮುದಾಯ ಅಭಿವೃದ್ಧಿ ಪ್ರಸ್ತಾವನೆಯಲ್ಲಿ ಸಮುದಾಯ ಅಭಿವೃದ್ಧಿ ಕುರಿತು ಈ ಕೆಳಗಿನಂತೆ ವ್ಯಾಖ್ಯಾನಿಸುತ್ತಾರೆ.[೧]

- ಜನತೆಯ ಸಾಮುದಾಯಿಕ ಜೀವನ ಕ್ರಮ, ಭಾಗವಹಿಸುವಿಕೆ, ಸ್ವ-ನಿರ್ದೇಶನ ಮತ್ತು ಸಮಗ್ರ ಸಾಮುದಾಯಿಕ ವ್ಯವಹಾರಗಳಿಗೆ ಸಹಕಾರಿಯಾಗುವ ಅವರ ಸಂಘಟನಾತ್ಮಕ ಪ್ರಯತ್ನವನ್ನೇ ಸಮುದಾಯ ಅಭಿವೃದ್ಧಿ ಎಂದು ಕರೆಯುತ್ತಾರೆ.

---

[೧] S.Rengasamy –Madurai Institute of Social Sciences, Introduction to Rural Community Development, accessed through http://www.scribd.com/doc/18906031/Introduction-to-Rural-Community-Development

- ಸಮುದಾಯ ಅಭಿವೃದ್ಧಿ ಎಂದರೆ ಸಾಂಪ್ರದಾಯಿಕ ರೀತಿಯ ಜೀವನ ಕ್ರಮದಿಂದ ಬೆಳವಣಿಗೆ ಹೊಂದುವ ಜೀವನ ಕ್ರಮಕ್ಕೆ ಹೊಂದಿಕೊಳ್ಳುವ ಬದಲಾವಣೆಯ ಪ್ರಕ್ರಿಯೆ.
- ಸಮುದಾಯ ಅಭಿವೃದ್ಧಿ ಒಂದು ಪ್ರಕ್ರಿಯೆಯಾಗಿದ್ದು, ಅದು ಸಮುದಾಯದಲ್ಲಿ ಸ್ಪರ್ಧೆಯನ್ನು ಹೆಚ್ಚಿಸುತ್ತದೆ ಮತ್ತು ಆ ಮೂಲಕ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವತ್ತ ಸಹಕಾರಿಯಾಗುತ್ತದೆ.
- ಸಮುದಾಯ ಅಭಿವೃದ್ಧಿ ಒಂದು ಸಾಮಾಜಿಕ ಪ್ರಕ್ರಿಯೆ ಆಗಿದ್ದು, ಜನತೆಯಲ್ಲಿ ಸ್ಪರ್ಧಾತ್ಮಕ ಮನೋಭಾವದಿಂದ ಬದುಕಲು ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಪಡೆದುಕೊಳ್ಳಲು ಸಹಕರಿಸುತ್ತದೆ. ಆ ಮೂಲಕ ಬದಲಾವಣೆಗೆ ದಾರಿ ಮಾಡಿಕೊಡುತ್ತದೆ.
- ಸಮುದಾಯ ಅಭಿವೃದ್ಧಿಯು ಸಾಮಾಜಿಕ ಕಾರ್ಯಗಳ ಒಂದು ನಿರಂತರ ಪ್ರಕ್ರಿಯೆಯಾಗಿದ್ದು, ಆ ಮೂಲಕ ಜನತೆ ಅ) ತಮ್ಮ ಸಾಮಾನ್ಯ ಹಾಗೂ ಗುಂಪಿನ ಬೇಡಿಕೆಗಳನ್ನು ವ್ಯಾಖ್ಯಾನಿಸುತ್ತಾರೆ. ಆ) ಪ್ರಜಾಪ್ರಭುತ್ವರೀತ್ಯ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಔಪಚಾರಿಕ ಹಾಗೂ ಅನೌಪಚಾರಿಕ ನೆಲೆಗಟ್ಟಿನಲ್ಲಿ ತಮ್ಮ ತಮ್ಮಲ್ಲೇ ಸಂಘಟಿತರಾಗುತ್ತಾರೆ. ಇ) ಅವರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮತ್ತು ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿಕೊಳ್ಳಲು ವ್ಯಕ್ತಿಗತವಾದ ಮತ್ತು ಗುಂಪು ಆಧಾರಿತ ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ. ಈ) ಅವರದೇ ಆದ ಸಂಪನ್ಮೂಲದಿಂದ ಗರಿಷ್ಟ ವಿಶ್ವಾಸದೊಂದಿಗೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾರೆ. ಉ) ಅಗತ್ಯವೆನಿಸಿದಾಗ ಸಮುದಾಯದ ಹೊರಗಿನಿಂದ ಸಂಪನ್ಮೂಲದ ಕ್ರೋಡೀಕರಣ (ಸೇವೆ ಮತ್ತು ಮಾನವ ಸಂಪನ್ಮೂಲ) ವನ್ನು ಮಾಡಿಕೊಳ್ಳುತ್ತಾರೆ.

ಸಮುದಾಯ ಅಭಿವೃದ್ಧಿ ಒಂದು ವಿಧಾನವಾಗಿದ್ದು, ಜನತೆಯ ಸಂಪನ್ಮೂಲ ಮತ್ತು ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಅದು ಸಹಾಯ ಮಾಡಲಾಗುತ್ತದೆ.

# ನನ್ನ ಬಾಲ್ಯ ಮತ್ತೆ ಸಿಗಬಹುದೇ?*

-ಗುರುರಾಜ ಬುದ್ಧ್ಯ

ನನ್ನ ತಂದೆಯವರು ಮೂಲತಃ ಕರ್ನಾಟಕದ ಕರಾವಳಿ ಭಾಗದ ಉಡುಪಿ ಜಿಲ್ಲೆಯ (ಅಂದಿನ ದಕ್ಷಿಣಕನ್ನಡ), ಕುಂದಾಪುರ ತಾಲ್ಲೂಕಿನ ಬೀಜಾಡಿ ಗ್ರಾಮದವರು. ಅವರು ಸರಕಾರಿ ಸ್ವಾಮ್ಯದ ಬ್ಯಾಂಕ್ ನಲ್ಲಿ ಕೆಲಸದಮೇಲೆ ಆಂಧ್ರಪ್ರದೇಶ (ಅವಿಭಜಿತ) ದ ಗ್ರಾಮೀಣಪ್ರದೇಶಗಳಲ್ಲಿ 1967ರ ನಂತರ ಕೆಲಸ ಪ್ರಾರಂಭಿಸಿದರು. ತಾಯಿ ಗುಂಟೂರಿನವರು. ಹಾಗಾಗಿ ನಾನು ಮತ್ತು ನನ್ನಿಬ್ಬರ ತಂಗಿಯರ ಜನನ ಮತ್ತು ವಿದ್ಯಾಭ್ಯಾಸಗಳೆಲ್ಲವೂ ಅಲ್ಲಿಯೇ ಆದವು.

ನನ್ನನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ನನ್ನ ಅಮ್ಮನನ್ನು ಬಹಳ ಸತಾಯಿಸುತ್ತಿದ್ದೆ, ಅಮ್ಮನ ಕಾಲಿಗೆ ಸುತ್ತಿಕೊಂಡು ನೇತಾಡುತ್ತಿದ್ದೆ. ಇದೇ ನನಗೆ ಬರುವ ಮೊದಲು ನೆನಪು. ನನಗೆ ಒಂದು ತುಪಾಕಿಯನ್ನು (ಸಣ್ಣ ಕಲ್ಲು ಹಾಕಿ, ಎಳೆದು ಹೊಡೆಯುವ) (ಬೆಂಗಳೂರಿಗೆ ರಜಕ್ಕೆ ಬಂದಾಗ )ಕೊಡಿಸಿದ್ದರು. ಆಂಧ್ರಕ್ಕೆ ಹಿಂದಿರುಗಿ ಬಂದಾಗ ಹತ್ತು-ಹದಿನೈದು ದಿನ ಅದರಲ್ಲೇ ಆಟ (ಗೊತ್ತಲ್ಲ, ಹೊಸಹುಚ್ಚು). ನಮ್ಮ ಪಕ್ಕದ ಮನೆ ಹುಡುಗ ಕಲ್ಲು ಹಾಕಿ ತುಪಾಕಿ ಒತ್ತುವಾಗ ಎಡಗೈ ಕಿರುಬೆರಳನ್ನು ತೂರಿಸಿ ಏಟು ಮಾಡಿಕೊಂಡಿರುವ ಗಾಯ ಈಗಲೂ ಇದೆ.

ನನ್ನ ಸಂಪೂರ್ಣ ಶಾಲಾ ವಿದ್ಯಾಭ್ಯಾಸ ತೆಲುಗು ಮಾಧ್ಯಮದಲ್ಲಿಯೇ ನಡೆದಿರುತ್ತದೆ. ಮನೆಯಲ್ಲಿ ಮಾತ್ರ ಅರ್ಧಂಬರ್ದ ಕನ್ನಡ ಮಾತನಾಡುತ್ತಿದ್ದೆವು. ಮುಖಕ್ಕೆ – ಮೋರಿ ಎನ್ನುತ್ತಿದ್ದೆವು. 1984 ರಲ್ಲಿ ಕರ್ನಾಟಕಕ್ಕೆ ಬಂದಮೇಲೆ ಸರಿಯಾದ ಕನ್ನಡ ಬರೆಯುವುದು, ಮಾತನಾಡುವುದು ಕಲಿತಿದ್ದು.

ನಮ್ಮ ಮನೆ ಬ್ಯಾಂಕಿನ ಹಿಂಭಾಗದ ಸಿಬ್ಬಂದಿ ವಸತಿಗೃಹದಲ್ಲಿತ್ತು, ಕಛೇರಿಯ ಸಮಯ ಮುಗಿದನಂತರ ಬ್ಯಾಂಕು ಆಟದ ಮೈದಾನವಾಗುತ್ತಿತ್ತು. ಕಡ್ಡಾಯವಾಗಿ ನಾವು ಬೆಳಗ್ಗೆ ಮತ್ತು ಸಂಜೆ ಟ್ಯೂಷನ್ ಗೆ ಹೋಗುತ್ತಿದ್ದೆವು. ಶಾಲೆಯ ನಂತರ ಆಟ, ನಂತರ ಟ್ಯೂಷನ್ – ಆಚೆಯಿಂದ ಹೋಗುವವರಿಗೆ ಸಾಮೂಹಿಕವಾಗಿ ಉರು ಹೊಡೆಯುವ ಶಬ್ದ ಮಠದಲ್ಲಿ ಶ್ಲೋಕಗಳ ಪ್ರವಚನದಂತೆ ಕೇಳುತ್ತಿತ್ತು. ಆಟದಿಂದ ಸುಸ್ತಾದ ನಮಗೆ ನಿದ್ದೆ, ಮತ್ತು ಹಾಗೇನೇ ಬಾಯಿಗೆ ಬಂದದ್ದನ್ನು ಒದರುರುವುದು ಇದ್ದೇ ಇತ್ತು.

ನಾನು ಓದಿದ ಎಲ್ಲಾ ಶಾಲೆಗಳೂ ಊರಾಚೆ, ಕೆರೆ ಅಥವಾ ಗದ್ದೆ ಪಕ್ಕದಲ್ಲಿ ಹಾಗೂ ವಿಶಾಲವಾದ ಆಟದ ಮೈದಾನವಿರುವ ಪ್ರದೇಶಗಳಲ್ಲಿರುತ್ತಿದ್ದವು. ಮಧ್ಯಾಹ್ನದ ಊಟದ ಮುಂಚೆ ಮಧ್ಯಂತರ ವಿರಾಮದ ಘಂಟೆ ಕೇಳಿಸಿದ ತಕ್ಷಣ ಕೆರೆ ಏರಿಮೇಲೆ ಲೈನಾಗಿ ನಿಂತು ನೀರು ಹಾಯಿಸುವುದು (ಮೂತ್ರವಿಸರ್ಜನೆ ಮಾಡುವುದು) ಖುಷಿಯೋ ಖುಷಿ. ಯಾರು ಎಷ್ಟು ದೂರ ನೀರನ್ನು ಬಿಡುತ್ತಾರೆನ್ನುವ ಸ್ಪರ್ಧೆ ಬೇರೆ.! ಒಂದು ಶಾಲೆಯಲ್ಲಿ ನಮಗೆ ಉಪ್ಪಿಟ್ಟು ಮಾಡಿಕೊಡುತ್ತಿದ್ದರು. ಅದನ್ನು ತಿನ್ನಬಾರದೆಂದು ಮನೆಯಲ್ಲಿ ಬೈಗಳು. ಆದರೂ ಹಲಗೆಮೇಲೆ ಹಾಕಿಸಿಕೊಂಡು ತಿನ್ನುತ್ತಿದ್ದೆ. ಮನೆಗೆ ಬಂದಮೇಲೆ ಹಲಗೆಮೇಲೆ ಬರೆಯುವಾಗ ಎಣ್ಣೆಯ ಪ್ರಭಾವದಿಂದ ಬರೆಯಲಾಗದೆ ಜಾರುತ್ತಿತ್ತು, ಹಲಗೆ ಶುಭ್ರವಾಗಿಟ್ಟುಕೊಂಡಿಲ್ಲವೆಂದು ಇನ್ನೊಂದು ಪೂಜೆ.

ನಮ್ಮ ಮನೆಯ ಮುಂದೆ ಒಂದು ಕುರಿ ಮತ್ತು ಹಸುಗಳ ದೊಡ್ಡಿಯೊಂದಿತ್ತು. ನಮ್ಮ ಊರಿನ ಎಲ್ಲ ರಾಸುಗಳು 4ಕಿ.ಮೀ ದೂರದಲ್ಲಿರುವ ಬೆಟ್ಟಗಳಿಗೆ ಮೇವಿಗಾಗಿ ಹೋಗುತ್ತಿದ್ದವು. ಬೆಳಗ್ಗೆ 11ರಿಂದ ಸಂಜೆ 5ರ ತನಕ ಆ ದೊಡ್ಡಿ ನಮ್ಮ ಆಟಗಳಿಗೆ ಲಭ್ಯವಿತ್ತು (ಕಬಡ್ಡಿ, ಲಗೋರಿ, ಚೂರಚೆಂಡು, ಚರ್, ಐಸ್ ಬೈಸ್, ಕಳ್ಳ-ಪೊಲೀಸ್.....). ಆ ದೊಡ್ಡಿಯ ಮೂಲೆಯಲ್ಲಿ ರಾಸುಗಳ ಒಣಗಿರುವ ಸಗಣಿಯ ದೊಡ್ಡ ಕುಪ್ಪೆ. ಅದರಲ್ಲೆಲ್ಲಾ ಹೊರಳಾಡಿ, ಬಿದ್ದು, ಜಾರಿ ಮನೆಗೆ ಹೋದಮೇಲೆ ಮತ್ತೆ ಬೈಗಳು. ಸ್ನಾನಮಾಡಿದಮೇಲೆ 'ಪೌಡರ್'

ಹಚ್ಚಿಕೋಬೇಕೆಂದು ಮನೆಯಲ್ಲಿ ಒತ್ತಾಯ. ನನ್ನ ತಲೆಯಲ್ಲಿ ಯೋಚನೆ – ಪ್ರಾಣಿಗಳು 'ಪೌಡರ್' ಹಚ್ಚಿಕೊಳ್ಳದಿದ್ದಾಗ ನಾನೇಕೆ ಹಚ್ಚಿಕೋಬೇಕು?

ನಾನು ಬೆಳೆದಿರುವ ಹಳ್ಳಿಗಳಲ್ಲಿ ವರ್ಷಕ್ಕೊಮ್ಮೆ 'ವನಭೋಜನ' ಮಾಡುತಿದ್ದೆವು. ಅಂದರೆ ಒಂದು ದಿನ ಊರಾಚೆ ತೋಟಕ್ಕೆ ಹೋಗಿ ಇಡೀ ದಿನ ಕಳೆಯುವುದು. ಮರಹತ್ತುವುದು, ಲಗೋರಿ, ಓಡುವುದು ಇತ್ಯಾದಿ. ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಪ್ರತಿಯೊಂದು ಮನೆಮುಂದೆ 'ಗೊಬ್ಬೆಮ್ಮ' ಇಡುತ್ತಾರೆ. ಗೊಬ್ಬೆಮ್ಮ ಎಂದರೆ ದನದ ಅಥವಾ ಎಮ್ಮೆಯ ಸಗಣಿಯನ್ನು ನೀರಿನಲ್ಲಿ ಕಲಸಿ ಮನೆ ಮುಂದಿನ ನೆಲ ಶುಭ್ರಮಾಡಿ, ಸಗಣಿಯ ದೊಡ್ಡ ಚೆಂಡನ್ನು ಇಟ್ಟು ಅದರ ಮೇಲೆ ದಾಸವಾಳ ಹೂವನ್ನು ಇಡುವುದು. ಇಡೀ ಊರಿನಲ್ಲಿ ಮನೆಗಳ ಮುಂದೆ ಗೊಬ್ಬೆಮ್ಮಗಳನ್ನು ನೋಡಬಹುದು. ದಾರಿಯಲ್ಲಿ ಹೋಗುತ್ತಾ ನೀವು ಸ್ವಲ್ಪವಾದರೂ ಗಮನ ಕೊಡದೆ ಗೊಬ್ಬೆಮ್ಮ ತುಳಿದರೆ, ನೀವು ಜಾರೆಬಂಡೇನೇ!!



ಬೆಂಗಳೂರಿಗೆ ಬಂದು 33 ವರ್ಷಗಳಾಗಿ ಈಗಿನ ಮಕ್ಕಳ್ಳನ್ನು ನೋಡುವಾಗ ಏನಪ್ಪಾ ಬಾಲ್ಯ ಹೀಗೂ ಇರುತ್ತದಾ ಎಂದೆನಿಸುತ್ತದೆ. ಮಕ್ಕಳನ್ನು ಶಾಲೆಗೆ (ಮುಖ್ಯವಾಗಿ ಖಾಸಗಿ ಶಾಲೆಗೆ) ಬಿಡುವ ತಂದೆತಾಯಿಗಳನ್ನು ಹೆಚ್ಚು ನೋಡಬಹುದು. ಮಕ್ಕಳಲ್ಲಿ ತನ್ನ ಪ್ರತಿಬಿಂಬ ನೋಡುತ್ತಾ ಮಕ್ಕಳು ಶಾಲಾ ಕೊಠಡಿಯಲ್ಲಿ ಕುಳಿತು ಕಿಟಕಿಯಿಂದ ನೋಡಿದ ಮೇಲೆ ತಂದೆತಾಯಿಯರು ಮನೆಗೆ ನಿರ್ಗಮಿಸುವುದು, ಅತಿಯಾದ ನಿರೀಕ್ಷೆಯ ಮಾನಸಿಕ ಸ್ಥಿತಿಯೇ ಅಥವಾ ಮತ್ತಿನ್ನೇನೋ?

ಈಗಿನ ನಗರದ ಮಕ್ಕಳಿಗೆ ಬಹಳ ಸುವಿಹಾರಿ ವಿಲಾಸಿ ಜೀವನ. ಟಿವಿ, ಮೊಬೈಲ್, ಇಂಟರ್‌ನೆಟ್, ಕೇಬಲ್ ಇತ್ಯಾದಿಗಳ ಸುಲಭ ಲಭ್ಯತೆ. ಮೊದಲು ನಾವೆಲ್ಲಾ ಒಟ್ಟಿಗೆ ಕುಳಿತು ಟಿವಿ ನೋಡುತ್ತಿದ್ದರೆ, ಈಗ ಮಕ್ಕಳು ಮೊಬೈಲ್ ನಲ್ಲಿಯೇ ಒಬ್ಬೊಬ್ಬರೇ ಕುಳಿತು ಎಲ್ಲವನ್ನೂ ನೋಡುತ್ತಿರುತ್ತಾರೆ. ಮತ್ತು ಬೆರಳುಗಳಲ್ಲಿಯೇ ವ್ಯಾಯಾಮ ಹೆಚ್ಚು. ಹಾಗಾಗಿ ಆಟದ ಮೈದಾನಕ್ಕೆ ಹೋಗುವ ಸಂದರ್ಭ ಕಡಿಮೆ. ಮನೆಯಲ್ಲಿ ಮಾಡಿರುವ ತಿನಿಸುಗಳಿಗಿಂತ ಕಂಪೆನಿಗಳ ಬಣ್ಣ ಬಣ್ಣದ ಪೊಟ್ಟಣಗಳಲ್ಲಿ ತಯಾರಾದ, ಪೌಷ್ಟಿಕಾಂಶವಿಲ್ಲದಿರುವ ತಿನಿಸುಗಳನ್ನು ತಿನ್ನುವುದೇ ಹೆಚ್ಚು. ಮಾಲ್ ಮತ್ತು ಮಲ್ಟಿಪ್ಲೆಕ್ಸಗಳಲ್ಲಿ ಕಾಲ ಕಳೆಯುತ್ತಾರೆ.

ಮಕ್ಕಳು ನೈಜತೆಯಿಂದ ದೂರವಿರುವಂತೆ ಬೆಳೆಯುವುದನ್ನು ನಾನು ನೋಡುತ್ತಿದ್ದೇನೆ. ಕೃತ್ರಿಮ ಜೀವನಶೈಲಿಯ ಪದರಗಳಲ್ಲಿ ಬೆಳೆಯುತ್ತಾ ಸದೃಢವಾದ ಮಾನಸಿಕ ಸ್ಥಿತಿಯಿಲ್ಲದೆಯೇ, ತಾವೇನು ಮಾಡಬೇಕೆನ್ನುವ ಗೊಂದಲಗಳಲ್ಲಿ, ತಂದೆತಾಯಿಯರು ಹಾಕಿರುವ ಗುರಿಮುಟ್ಟಲಾಗದಿರಲು ತುಂಬಾ ಮಕ್ಕಳು ಆತ್ಮಹತ್ಯೆಗೆ ಶರಣಾಗುವುದನ್ನು ಕಾಣಬಹುದು.

ನನ್ನ ಮಾನದಂಡ ನನ್ನ ಬಾಲ್ಯದ ಅನುಭವ, ಅದೂ 47 ವರ್ಷಗಳ ಹಿಂದಿನದ್ದು. ಹಲವಾರು ಬದಲಾವಣೆಗಳು ಆಗಿವೆಯೆನ್ನುವ ವಾಸ್ತವಿಕತೆಯನ್ನು ನಾನು ಒಪ್ಪುತ್ತೇನೆ. ಆದರೆ ಇಡೀ ಸಮಾಜದ ಪ್ರವಾಹ ಹೋಗುತ್ತಿರುವ ಗತಿ ಮತ್ತು ಅದರ ವೇಗದ ಪರಿಣಾಮಗಳನ್ನು ಈಗಾಗಲೇ ನೋಡುತ್ತಾ, ಮಕ್ಕಳ ಉಲ್ಲಾಸದ ಬಾಲ್ಯವನ್ನು ಅದು ತನ್ನೊಂದಿಗೆ ಸೆಳೆದುಕೊಂಡು ಹೋಗುವುದರೊಂದಿಗೆ ಮಕ್ಕಳ ಜೀವನ ಬುಡಮೇಲು ಮಾಡುತ್ತಾ ಇದೆಯೇ ಎನ್ನುವುದೇ ನನ್ನ ನಿರಾಶೆ.

## ಮತ್ತೆ ಬೇಕೆಂದರೂ ಸಿಗದ ರುಚಿ

– ನಿರಂಜನ ಗಾಣಿಗರ್

ಇಂದು ಮನುಷ್ಯ ಬಯಸಿದ್ದೆಲ್ಲವನ್ನೂ ಕ್ಷಣಮಾತ್ರದಲ್ಲಿ ಪಡೆಯುವ ದಾರಿಯಲ್ಲಿದ್ದಾನೆ. ಬದುಕುವ ಎಲ್ಲಾ ಉಪಾಯಗಳನ್ನು, ತಂತ್ರಗಳನ್ನು ಅವನು ಕಲಿತಿದ್ದಾನೆ. ಜಾಗತೀಕ ವಿದ್ಯಮಾನಗಳು ಅವನನ್ನು ಉನ್ನತಮಟ್ಟಕ್ಕೆ ಕೊಂಡೊಯ್ದಿದೆ. ಈ ಉನ್ನತಿಕೆಯಿಂದಲೇ ಮನುಷ್ಯ ಸಂಬಂಧಗಳನ್ನೂ ಸಹ ತನಗೆ ಇಷ್ಟಬಂದಂತೆ ರೂಪಿಸುವಷ್ಟು ಜಾಣ್ಮೆ ಇಂದು ಅವನಿಗಿದೆ. ತನ್ನ ಅವಶ್ಯಕತೆಗಳಿಗಾಗಿ ಏನೆಲ್ಲವನ್ನೂ ಮಾಡುವ ತಾಂತ್ರಿಕತೆಯ ಬೆನ್ನತ್ತಿ ಬದುಕುತ್ತಿದ್ದಾನೆ. ಜಾಗತೀಕರಣದ ಜೀವನ ಕ್ರಮದಲ್ಲಿ ಅವನು ಮುಳುಗಿ ಹಲವು ದಶಕಗಳೇ ಕಳೆದುಹೋಗಿವೆ. ಅವನ ಆಲೋಚನೆ, ಸಾಹಸ, ಸಂಶೋಧನೆ, ತಂತ್ರಜ್ಞಾನ, ವೈಜ್ಞಾನಿಕತೆ, ವೈಚಾರಿಕತೆಗಳೆಲ್ಲವೂ ಇಡೀ ವಿಶ್ವವನ್ನೇ ಚಿಕ್ಕದನ್ನಾಗಿ ಮಾಡಿವೆ. ಇಷ್ಟೇ ಅಲ್ಲದೆ ಹಣದ ಹಪಾಹಪಿಯಲ್ಲಿ ತನ್ನ ಇಡೀ ಬದುಕನ್ನೇ ಅಸಹನೀಯವಾಗಿ ಕಳೆಯುತ್ತಿದ್ದಾನೆ. ಇಷ್ಟೆಲ್ಲದರ ನಡುವೆ ಅವನ ಅವಶ್ಯಕತೆಗಳೂ ಸಹ ದಿನದಿಂದ ದಿನಕ್ಕೆ ಹೆಮ್ಮರವಾಗಿ ಬೆಳೆಯುತ್ತಲೇ ಇವೆ.

ಅಲ್ಲದೇ ಮಾನವೀಯತೆ, ಮನುಷ್ಯಪ್ರೀತಿ, ಭಾವನಾತ್ಮಕತೆ, ಮಮತೆ–ವಾತ್ಸಲ್ಯಗಳನ್ನು ಬೆಳೆಸಬೇಕಾಗಿದ್ದ ಜಗತ್ತು ಸಹ ಈ ಅವಶ್ಯಕತೆಗಳ ಕಾಲ್ತುಳಿತಕ್ಕೆ ತಕ್ಕ ಸವಲತ್ತುಗಳನ್ನು ಒದಗಿಸುತ್ತಿದ್ದೆ ಎಂಬ ಮಾತು ಕಠೋರವಾದರೂ ಇದನ್ನು ಒಪ್ಪಲೇಬೇಕಾದ ಅನಿವಾರ್ಯ ಸ್ಥಿತಿ ನಮ್ಮದು. ಆದ್ದರಿಂದ ಇದೆಲ್ಲದರ ಮಧ್ಯೆ ಸಿಲುಕಿಕೊಂಡಿರುವ ಮನುಷ್ಯ ಹಲವುಗಳನ್ನು ಕಳೆದುಕೊಳ್ಳುತ್ತಿರುವ ಆತಂಕದಲ್ಲಿದ್ದಾನೆ ಎಂಬ ಸತ್ಯ ಅವನ ಗಮನಕ್ಕೆ ಬಂದಂತಿಲ್ಲ. ಈ ಸತ್ಯ ಅವನಿಗೆ ಅರಿವಾಗುವ ಹೊತ್ತಿಗೆ ಅವನ ಮುಕ್ಕಾಲು ಭಾಗ ಬದುಕನ್ನು ಕಳೆದುಕೊಂಡಿರುತ್ತಾನೆ. ಹೀಗೆ ಅವನು ಕಳೆದುಕೊಳ್ಳುತ್ತಿರುವ ಪಟ್ಟಿ ಬಹಳ ದೊಡ್ಡದಿದೆ. ಅದರಲ್ಲಿ ಮೊದಲನೆಯದೇ 'ಬಾಲ್ಯದ ಬದುಕು' ಎನ್ನುವ ರುಚಿಯಾದ ಹಣ್ಣು.

ಮನುಷ್ಯ ಏನೇ ಗಳಿಸಿದರೂ, ಏನೇ ಸಾಧಿಸಿದರೂ, ಎಷ್ಟೇ ತಾಂತ್ರಿಕವಾಗಿ ಬೆಳೆದಿದ್ದರೂ, ಯಾವುದನ್ನೇ ಸೃಷ್ಟಿಸಿದರೂ ತನ್ನ ಬದುಕಿನ ಅತೀ ಮಧುರವಾದ ಬಾಲ್ಯವನ್ನು, ಬಾಲ್ಯದ ಬದುಕನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ಕೇವಲ ನೆನಪುಗಳಲ್ಲಿ ಮಾತ್ರ ಉಳಿದುಕೊಳ್ಳಬಹುದಾದರೂ ಈಗ ಅಂಥ ಉತ್ಕೃಷ್ಟವಾದ ಬಾಲ್ಯದ


ಅನುಭವಗಳು ಇಲ್ಲವಾದ್ದರಿಂದ ಅಂಥ ನೆನಪುಗಳೂ ಸಹ ಇಂದು ಕಣ್ಮರೆಯಾಗಿವೆ. ನಮ್ಮ ಮತ್ತು ಹಿಂದಿನ ತಲೆಮಾರಿನವರನ್ನು 'ನಿಮ್ಮ ಬಾಲ್ಯದ ಬಗ್ಗೆ ಹೇಳಿ ?' ಎಂದಕೂಡಲೇ ಮೈಯೆಲ್ಲಾ ರೋಮಾಂಚನವಾಗಿ, ಎಲ್ಲಾ ಅನುಭವಗಳು ಮಾತುಗಳ ರೂಪದಲ್ಲಿ ಸಹಜ–ಸಾಚಾತನದಲ್ಲಿ ಹೊರ ಹರಿಯುತ್ತಿದ್ದವು. ಅವರು ಅವುಗಳನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾ, ಆ ಮುಗ್ಧ ಅನುಭವಗಳನ್ನು ಅಗಿದು–ತಿಂದು ಅದರ ಸವಿಯನ್ನು ಸವಿಯುತ್ತಿರುತ್ತಾರೆ.

ಬಾಲ್ಯ ಎಂದಕೂಡಲೇ ನಮಗೆ ನೆನಪಾಗುವುದು ಆಟ–ಹುಡುಗಾಟ, ಅಜ್ಜಿ–ಅಜ್ಜಂದಿರ ಕತೆ, ತಂದೆ–ತಾಯಂದಿರ ಪ್ರೀತಿತುಂಬಿದ ಹೊಡೆತ, ಶಾಲೆಬಿಟ್ಟು ತಿರುಗಿದ ಮೋಜು, ಇದಕ್ಕಾಗಿ ಮನೆಯಲ್ಲಿ ಅಮ್ಮ ಹಾಕಿದ ತೂಗೋಡ(ಕೈ–ಕಾಲು ಕಟ್ಟಿ ಮೇಲಕ್ಕೆ ನೇತಾಕುವುದು), ಯಾರ ಹೊಲದಲ್ಲೋ–ಮನೆಯಲ್ಲೋ ಏನನ್ನೋ ಕದ್ದು ಸಿಕ್ಕಿಬಿದ್ದು ಮನೆಗೆ ಹೋಗದೇ ಓಡಿ ಹೋಗಿ ಎರಡು–ಮೂರುದಿನ ಮನೆ ಸೇರದ ಭಯ, ಬಿದ್ದೋ–ಜಗಳವಾಡೋ ಮಾಡಿಕೊಂಡ ಗಾಯ, ಕದ್ದು ಕದ್ದು ನೋಡಿದ ಚಕ್ಕಂದದ ಆಟಗಳು, ಹಸುವನ್ನೋ–ಎಮ್ಮೆಯನ್ನೋ ಮೇಯಿಸಲು ಹೋಗಿ ಹೊಲದವನಿಂದ ತಿಂದ ಬೆತ್ತದೇಟು, ಪರೀಕ್ಷೆ ಎಂಬ ನುಂಗಲಾಗದ ತುತ್ತು, ಆಗಾಗ ಮಳೆಯಲ್ಲಿ ನೆಂದು ಕೆಸರಾಟವಾಡಿ ಮನೆಗೋದರೆ ಮನೆಯಿಂದ ಹೊರದೂಡಿದ ಕ್ಷಣ, ತೆಕ್ಕೆಬಿದ್ದ ನಾಯಿಗಳನ್ನು ಅಟ್ಟಿಸಿಕೊಂಡು ಹೋಗಿ ಊರವರಿಂದ ಬೈಸಿಕೊಂಡ ಅವಮಾನ, ಮಾಡುವ ಕೆಲಸದಿಂದ ತಪ್ಪಿಸಿಕೊಳ್ಳಲು ಕಾಯಿಲೆಯ ನೆಪಹೇಳಿ ಮಲಗಿದಾಗ ಬಲವಂತವಾಗಿ ಕುಡಿದ ಬೇವಿನ ಕಷಾಯ, ಆಸ್ಪತ್ರೆಯಲ್ಲಿ ಸೂಜಿ ಮಾಡುತ್ತಾರೆ ಎಂದು ಅರಾಮಿಲ್ಲದಿದ್ದರೂ ಇದ್ದೇನೆ ಎಂದು ಮಾಡಿದ ನಾಟಕ, ಕರಡಿಯಾಡಿಸುವವ ಬಂದಾಗ ಅದರ ಮೇಲೆ ಕೂರಿಸಿ ಅವನು ಕೊಟ್ಟ ತಾಯತವನ್ನು ಭಕ್ತಿಯಿಂದ ಕಟ್ಟುವ ಅಮ್ಮನ ನಂಬಿಕೆ, ಗುಡುಗು–ಸಿಡಿಲು ಬಂದಾಗ ಅಮ್ಮ ತಬ್ಬಿ ಬಿಗಿಯಾಗಿ ಹಿಡಿದು ಸೀರೆಯ ಸೆರಗಲ್ಲಿ ಮುಚ್ಚಿ ಮಲಗಿಸುವ ರೀತಿ, ಕಣ್ಣು ಕೆಂಪಾಗಿ ಕಣ್ಣಾದಾಗ ಕಣ್ಣಲ್ಲಿ ಕೊತ್ತುಂಬರಿ ಸೊಪ್ಪಿನ ರಸ ಮತ್ತು ನಿಂಬೆಹಣ್ಣಿನ ರಸ ಹಾಕಿಸಿಕೊಂಡು ಉರಿಯಿಂದ ಒದ್ದಾಡಿದ ಅನುಭವ, ಹಬ್ಬ–ಹರಿದಿನಗಳಲ್ಲಿ ಹೊಸಬಟ್ಟೆ ತೊಟ್ಟು ಎಲ್ಲರೂ ನೋಡಲಿ ಎಂದು ಊರನ್ನೆಲ್ಲಾ ಗತ್ತಿನಿಂದ ತಿರುಗಿ ಸುಸ್ತಾಗಿ ಮನೆಗೆ ಬಂದಾಗ ತನ್ನ ಸೆರಗಿನಿಂದಲೋ; ಉಪ್ಪು–ಮೆಣಸಿನಕಾಯಿಂದಲೋ ನೆದರು ತೆಗೆದು ಥೂ...ಥೂ ಅಂತಾ ಉಗಿದ ಅಜ್ಜಿಯ ಪ್ರೀತಿ.

ಊರಿಗೆ ನಾಟಕ ತಂಡಗಳು ಬಂದು ಬಿಡಾರ ಹಾಕಿಕೊಂಡು ಅಭ್ಯಾಸ ಮಾಡುತ್ತಿರುವಾಗ ಕದ್ದು ಕೇಳಿ ಅವರಂತೆ ನಾವು ಡೈಲಾಗ್‌ಗಳನ್ನು ಹೇಳಿಕೊಂಡು ಕಲಿಯುತ್ತಿದ್ದ ಉತ್ಸಾಹ, ಗೆಳೆಯರ ಜೊತೆ ಸೇರಿ ಮಾಡಿದ ಹರಟೆ–ಜಗಳ–ಕದ್ದುಮುಚ್ಚಿ ಮಾಡಿದ ದುರಭ್ಯಾಸಗಳು, ಶಾಲೆಯಲ್ಲಿ ಓದಲಿಲ್ಲ ಎನ್ನುವ ಕಾರಣಕ್ಕೆ ಮೇಸ್ಟ್ರ

ಹುಡುಗಿಯರ ಕೈಯಲ್ಲಿ ಕಪಾಳಕ್ಕೆ ಹೊಡೆಸಿದ ಸಿಟ್ಟು, ಊಟಕ್ಕೆ ಬಿಟ್ಟಾಗ ಶಾಲೆಯ ಅಂಗಳದಲ್ಲಿ ಗುಂಡಿತೋಡಿ ಅದರ ಸುತ್ತಲೂ ಮಣ್ಣು ಕಟ್ಟಿ ಅದನ್ನು ಐದಾರು ಹುಡುಗರು ಸೇರಿ ಉಚ್ಚೆ ಹೊಯ್ದು ತುಂಬಿಸಿ; ನಮ್ಮ ಶತ್ರುಗಳನ್ನು ಅದರ ಮೇಲೆ ತಂದು ಬೀಳಿಸುವ ಚಾಲಾಕಿತನ, ಪದೇ-ಪದೇ ಹೀಯಾಳಿಸುವ ಮೇಸ್ಟ್ರುಗಳ ಬಗ್ಗೆ ಸಹಿಸಲಾಗದ ಸಿಟ್ಟು, ಹೀಗೆ ಒಂದಲ್ಲ ಎರಡಲ್ಲ ಸಾವಿರ ಸಾವಿರ ಅನುಭವಗಳು ಅಚ್ಚಹಸಿರಾಗಿ ಕಂಗೊಳಿಸುತ್ತಿದ್ದವು. ಇವುಗಳಲ್ಲಿ ಶಾಲೆಯ ಪ್ರಸ್ತಾಪ ಬಹಳ ವಿರಳವಾಗಿಯೇ ಇರುತ್ತಿತ್ತು. ಶಾಲೆ ಮತ್ತು ಓದು ಕೇವಲ ಬದುಕಿನ ಒಂದು ಭಾಗವಾಗಿತ್ತು.

ಆದರೆ ಇಂದಿನ ಮಕ್ಕಳನ್ನು 'ನಿಮ್ಮ ಬಾಲ್ಯದ ಅನುಭವಗಳನ್ನು ಹೇಳಿ?' ಎಂದು ಕೇಳಿದರೆ ಬರುವ ಉತ್ತರ- ನಾನು ಒಂದರಿಂದ ಐದನೆ ತರಗತಿವರೆಗೆ ಈ ಶಾಲೆಯಲ್ಲಿ ಓದಿದೆ, ಆರರಿಂದ ಹತ್ತು ಆ ಶಾಲೆಯಲ್ಲಿ ಓದಿದೆ, ಪಿ.ಯು.ಸಿ ಮತ್ತೊಂದು ಕಾಲೇಜು; ಡಿಗ್ರಿ ಇನ್ನೊಂದು ಕಾಲೇಜು ಎಂದು ಹೇಳಿ ತಮ್ಮ ಮಾತನ್ನು ನಿಲ್ಲಿಸಿಬಿಡುತ್ತಾರೆ. ಇದಕ್ಕೆ ಕಾರಣ ಅವರಿಗೆ ಅನುಭವಗಳು ಎನ್ನುವ ಯಾವುದೇ ಹಸಿಯ ನೆನಪುಗಳು ಇಲ್ಲವಾಗಿ ಕೇವಲ ಓದು-ಬರಹ; ಪಾಠ-ಪರೀಕ್ಷೆ; ಡಾಕ್ಟರ್-ಇಂಜಿನಿಯರ್ ಆಗುವ ಬಯಕೆಯ ಹೇರಿಕೆ ಇತ್ಯಾದಿಗಳೇ ತುಂಬಿ ಹೋಗಿ ತಲೆಯಲ್ಲಿ ಕೇವಲ ಯಾಂತ್ರಿಕತೆಯೇ ಮನೆಮಾಡಿರುತ್ತದೆ. ಓದೇ ಬದುಕಾಗಿ ಉಳಿದವೆಲ್ಲ ಮರೆಮಾಚಿ ಹೋಗುತ್ತಿವೆ. ಇದಕ್ಕೆ ಇವತ್ತಿನ ಪೋಷಕರೂ ಸಹ ಕಾರಣವಾಗಿದ್ದಾರೆ.



ಅಂದು ಪೋಷಕರು ಮಗುವಿನ ನಿಜವಾದ ಸರ್ವಾಂಗೀಣ ಬೆಳವಣಿಗೆಯ ರುವಾರಿಗಳಾಗಿದ್ದರು ಎಂದರೆ ತಪ್ಪಾಗಲಾರದು. ಆದರೆ ಇಂದು ಹುಟ್ಟಿದ ಮಗು ಮೂರು ವರ್ಷದ ಒಳಗೆ ಮನೆ ಬಿಟ್ಟು ಶಾಲೆಯನ್ನು ಸೇರಿಬಿಡುತ್ತದೆ. ಅದಕ್ಕೆ ಮನೆಯಲ್ಲಿ ಹೆಚ್ಚು ಕಾಲ ಕಳೆಯಲು ಅವಕಾಶವೇ ಇಲ್ಲದಂತಾಗಿದೆ. ಇದು ಇಂದಿನ ಪೋಷಕರಿಗೆ ಅನಿವಾರ್ಯವೂ ಅಗಿಬಿಟ್ಟಿದೆ. ಈ ಕಾರಣದಿಂದ ಮಗು ಮಾಡುವ ಎಲ್ಲಾ ತುಂಟಾಟಗಳು ಇಂದು ಅಸಹ್ಯ-ಅಸಹನೀಯವೆಂದು ಕಾಣುವ ಪೋಷಕರು ಅವುಗಳನ್ನು ತಡೆದು ಮಕ್ಕಳ ಕ್ರಿಯಾಶೀಲತೆಯ ಅನುಭವಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಇಂದು ಮಗು ಮಗುವಾಗಿ ಉಳಿಯದೇ ಶಿಸ್ತು-ಶಿಕ್ಷೆಯಿಂದ ಯಂತ್ರಗಳಾಗಿ ಬೆಳೆಯುತ್ತಿದೆ. ಈ ಹೊತ್ತಿನಲ್ಲಿ ನಮ್ಮ ಜನಪದರು ಕಟ್ಟಿರುವ ಒಂದು ಸೊಗಸಾದ ಒಗಟು ನೆನಪಾಗುತ್ತಿದೆ. ಅದೆಂದರೆ-

"ಮರದೊಳಗೆ ಮರ ಹುಟ್ಟಿ
ಮರಚಕ್ರ ಕಾಯಾಗಿ
ತಿನ್ನಬಾರದ ಹಣ್ಣು ಬಲುರುಚಿ"

ಈ ಹಣ್ಣು ಬೇರೆ ಯಾವುದೂ ಅಲ್ಲ ಅದುವೇ 'ಮಗು'. ಅಂದು ಮಗು ಮಾಡುವ ಎಲ್ಲಾ ತುಂಟತನಗಳನ್ನು ಮೋಜಿನಿಂದ ಆನಂದಿಸುವ; ಅದರೊಟ್ಟಿಗೆ ತಾವೂ ಮಕ್ಕಳಾಗಿ ಖುಷಿ ಪಡುವ, ಅದರ ಬೆಳವಣಿಗೆಯಲ್ಲಿ ಬದುಕಿನ ಎಲ್ಲಾ ಅನುಭವಗಳನ್ನು ಜೊತೆ-ಜೊತೆಗೆ ಉಣಬಡಿಸಿ ಅವರನ್ನು ಸಮಾಜದಲ್ಲಿ ಜೀವಿಸಲು ಸಮರ್ಥನನ್ನಾಗಿ ಹೊರಕಳಿಸುವ ಪೋಷಕರು ನಿಜವಾಗಿಯೂ ಮಕ್ಕಳ ಜೀವಂತಿಕೆಯ ರುವಾರಿಗಳಾಗಿದ್ದರು. ಈಗ ಇಂಥಹ ಜೀವಂತಿಕೆಯ ಮುಗ್ಧ ಅನುಭವಗಳನ್ನು ತಾವು ಅನುಭವಿಸದೇ ಮಕ್ಕಳಿಗೂ ಅನುಭವಿಸಲು ಬಿಡದೇ ಜೀವನವನ್ನು ಬಹು ಸಂಕೀರ್ಣ ಮತ್ತು ಸಂದಿಗ್ಧತೆಯ ನೆರಳಲ್ಲಿ ಬದುಕುವಂತೆ ಮಾಡುತ್ತಿದ್ದಾರೆ.

ನಮ್ಮಲ್ಲಿ ಒಂದು ಮಾತಿದೆ; ಯಾವ ವ್ಯಕ್ತಿ ಉನ್ನತವಾದ, ಉತ್ಕೃಷ್ಟವಾದ, ಸಹಜವಾದ, ಮುಗ್ಧತೆಯಿಂದ ಕೂಡಿದ ಬಾಲ್ಯದ ಅನುಭವಗಳನ್ನು ಹೊಂದಿರುತ್ತಾನೋ ಅವನು ಅತ್ಯಂತ ಸಮರ್ಥವಾಗಿ ಜೀವನವನ್ನು ಸಾಗಿಸುತ್ತಾನೆ ಮತ್ತು ಸಶಕ್ತನಾಗಿ ಬದುಕುತ್ತಾನೆ ಎಂಬುದು. ಹಾಗಾಗಿ ಮತ್ತೆ ಮತ್ತೆ ಸಿಗದ ಈ ಬಾಲ್ಯದ ಮುಗ್ಧ ಮತ್ತು ಹಸಿಯಾದ ಅನುಭವಗಳನ್ನು ನಮ್ಮ ಮುಂದಿನವರು ಪಡೆಯಲು ಸಹಕರಿಸೋಣ. ಮಕ್ಕಳನ್ನು ಮಕ್ಕಳನ್ನಾಗಿಯೇ ನೋಡುತ್ತಾ ಅವರ ಬಾಲ್ಯವನ್ನು ಕಿತ್ತುಕೊಳ್ಳದೇ ಅವರಿಗೆ ಅನುಭವಿಸಲು ಬಿಟ್ಟು ದೂರದಿಂದಲೇ ಆನಂದಿಸೋಣ.

# “ಬಾಲ್ಯ”ದ ಗೆಳೆತನ

–ದಿಲೀಪಕುಮಾರ ರಾಠೋಡ

ಬಂಜಾರಾ ಜನಾಂಗ ಈ ಮೊದಲು ಕಾಡಿನಲ್ಲೆ ಇವರ ವಾಸ, ಅಲ್ಲಿ ಇಬ್ಬರು ಆತ್ಮೀಯ ಗೆಳೆಯರಿದ್ದುರು ಮಕ್ಕಳಾದ ರಾಜು ನಾಯ್ಕ ಮತ್ತು ಅದೇ ಕಾಡಿನ ಪಕ್ಕದಲ್ಲಿ ಒಂದು ಚಿಕ್ಕ ಹಳ್ಳಿ ಅಲ್ಲಿ ಮುಸ್ಲಿಂ ಸಮುದಾಯದ ಹುಡುಗ ರಫೀಕ ಆಪ್ತ ಗೆಳೆಯರು. ಕಾಡಿನಲ್ಲಿ ಹುಟ್ಟಿ ಬೆಳೆದ ಕಾಡಿನ ಜನರಿಗೆ ಕಾಡೇ ಆಶ್ರಯ. ಕಾಡಿನಲ್ಲಿ ಬೆಳೆಯುವ ಗೆಡ್ಡೆ ಗೆಣಸು ಹಾಗು ಪ್ರಾಣಿ ಪಕ್ಷಿಗಳ ಮಾಂಸವೇ ಮುಖ್ಯವಾದ ಆಹಾರ.ಗೆಡ್ಡೆ ಗೆಣಸು ದೊರೆಯದ ದಿನಗಳಲ್ಲಿ ಪ್ರಾಣಿ ಪಕ್ಷಿಗಳ ಬೇಟೆಯಾಡಿ ಅವುಗಳ ಮಾಂಸ ಕುದಿಸಿ ತಿನ್ನುವುದು ಈ ಜನರ ಪದ್ದತಿ. ಅಂದು ಉಗಾದಿ ಈ ಜನ ಹಬ್ಬವಾದ ಮರುದಿನ ಬೇಟೆಯಾಡುವ ಪದ್ದತಿ ಅಂದು ರಾಜು ಮತ್ತು ರಫೀಕ ಪ್ರಾಣಿಗಳನ್ನು ಬೇಟೆಯಾಡಲು ಕಾಡಿಗೆ ಹೋದರು.ಸರಿಯಾದ ಜಾಗ ನೋಡಿ ತಮ್ಮ ಬೇಟೆಗೆ ಸಿದ್ದತೆ ಮಾಡಿಕೋಳ್ಳುತ್ತಾ ರಫೀಕ ಹೇಳಿದ ,

“ನೋಡ ರಾಜು ನಾನು ಇಲ್ಲಿ ಪ್ರಾಣಿಗಳನ್ನು ಹಿಡಿಯಲು ಒಂದು ಬಲಿ ಹಾಕಿನಿ. ಇದರೋಳಗ ಯಾವುದೇ ಪ್ರಾಣಿ ಬಿದ್ದರೂ ನಾವಿಬ್ಬರೂ ಅದರ ಮಾಂಸವನ್ನು ಸಮನಾಗಿ ಹಂಚ್ಕೋಳ್ಳೊನ”ಎಂದ .

“ನೋಡು ರಫೀಕ ನನಗೆ ಸ್ವಂತ ಬೇಟೆಯಾಡಬೇಕೆಂಬ ಆಸೆ ಐತಿ. ಆದುದರಿಂದ ನಾನು ಪಕ್ಷಿಗಳನ್ನು ಹಿಡಿಯಲು ಈ ಬಲೆ ಹಾಕಿನಿ ನನಗೆ ಇದರೋಳಗೆ ಬೀಳುವ ಯಾವುದಾರು ಪಕ್ಷಿಯ ಮಾಂಸ ಸಾಕು. ನನಗೆ ಯಾವ ಪ್ರಾಣಿಯ ಮಾಂಸವೂ ಬ್ಯಾಡ “ಎಂದು ರಾಜು ರಫೀಕನ ಮಾತನ್ನು ಒಪ್ಪಿಕೋಳ್ಳಲಿಲ್ಲ.

ತನ್ನ ಗೆಳೆಯನ ಮಾತಿಗೆ ರಫೀಕ ಎದುರು ಮಾತಾಡಲಿಲ್ಲ. ಅವನಿಗೆ ಪಾಲು ಮಾಡಿಕೋಳ್ಳಲು ಇಷ್ಟವಿಲ್ಲದಿದ್ದರೆ ನನಗೇನು ಎಂದು ಸುಮ್ಮನಾದ .ಇಬ್ಬರೂ ತಮ್ಮ ತಮ್ಮ ಬಲೆ ಸಿದ್ದಮಾಡಿ ಪ್ರಾಣಿ ಪಕ್ಷಿಗಳು ಬಿಳುವಂತೆ ಸರಿ ಹೊಂದಿಸಿಟ್ಟು ಮರದ ಮೇಲೆ ನಿರ್ಮಿಸಿಕೊಂಡಿದ್ದ ಆಟ್ಟದಲ್ಲಿ ವಿಶ್ರಾಂತಿ ಪಡೆಯುತಿದ್ದರು. ಬೇಳಿಗ್ಗೆ ರಾಜು ಬೇಗನೆ ಎಚ್ಚರಗೊಂಡು ತಮ್ಮ ಬಲೆಗಳ ಕಡೆ ನೋಡಿದ .ರಫೀಕನ ಬಲೆಯೋಳಗೆ ಒಂದು ಜಿಂಕೆ ಸಿಕ್ಕಿಹಾಕಿಕೊಂಡಿತ್ತು. ಆದರೆ ರಾಜುವಿನ ಬಲೆಯೋಳಗೆ ಏನು ಬಿದ್ದಿರಲಿಲ್ಲಾ ಅದನ್ನು ಕಂಡು ರಾಜುವಿಗೆ ಭಾಳ ಬ್ಯಾಸರ ಆಯ್ತು.



ಹಾಗೆ ಗೆಳೆಯನ ಕಡೆ ನೋಡಿದ .ರಫಿಕ ಜೋರ ನಿದ್ರೆಯಲ್ಲಿದ್ದ. ರಾಜುನ ಮನಸ್ಸಲ್ಲಿ ತುಂಬಾ ಕೆಟ್ಟ ವಿಚಾರ ಬರತೊಡಗಿತು. ಇದೆ ಸರಿಯಾದ ಸಮಯ ಎಂದುಕೊಂಡು ರಾಜು ಸಾವಕಾಶವಾಗಿ ಮರದಿಂದ ಕೆಳಗೆ ಇಳಿದು ಜಿಂಕೆ ಮರಿಯನ್ನು ರಫಿಕನ ಬಲೆಯೋಳಗಿಂದ ತಗಿದು ತನ್ನ ಬಲೆಯೋಳಗೆ ಹಾಕಿಬಂದ.ಆಮೇಲೆ ನಿಧಾನವಾಗಿ ಆಟ್ಟಣೆಯೋಳಗೆ ಹತ್ತಿಬಂದು ಸ್ವಲ್ಪ ಹೋತ್ತು ಗೆಳೆಯನ ಜೊತೆಗೆ ಮಲಗಿದ. ನಂತರ ನಿದ್ರೆಯಿಂದ ಎದ್ದವನಂಗ ನಟಿಸುತ್ತ ರಫೀಕನನ್ನು ಕರೆದಾ. ಓ ಗೆಳೆಯಾ.................. ! ಎದ್ದೇಳೊ

ರಫೀಕ ಎಚ್ಚರಗೊಂಡು ಕೆಳಗೆ ನೋಡಿದ ರಾಜನು ಹಾಗೆ ಕೆಳಗೆ ನೋಡುತಿದ್ದ. "ನೋಡು ರಫೀಕ ,ನನ್ನ ಬಲೆಯೋಳಗೆ ಒಂದು ಜಿಂಕೆ ಮರಿ ಸಿಕ್ಕಿಹಾಕಿಕೊಂಡಿದೆ. ನಿನ್ನ ಬಲೆಯೋಳಗೆ ಎನೂ ಬಿದ್ದಹಾಗಿಲ್ಲ "ಎಂದ ರಾಜು. ರಫೀಕ ಗೆಳೆಯನ ಮಾತಿಗೆ ಎನನ್ನು ಹೇಳದೆ ಮೌನವಾಗಿದ್ದ. ಸ್ವಲ್ಪ ಹೊತ್ತಿನ ಬಳಿಕ ರಫೀಕ ಅಲ್ಲಿಂದ ಎದ್ದು ಹೊರಟು ಹೋದ. ರಾಜು ತನ್ನ ಜಾಣತನಕ್ಕೆ ಹೆಮ್ಮೆಪಟ್ಟುಕೊಂಡ. ಗೆಳೆಯ ಬಂದ ಮೇಲೆ ಅಲ್ಲಿಂದ ಹೊರಡಬೇಕೆಂದು ಕಾಯತೋಡಗಿದ. ಆದರೆ ರಫೀಕ ಹಿಂತಿರುಗಿ ಬರಲೇಯಿಲ್ಲ. ಕೊನೆಗೆ ನೀರಿನ ತೊರೆಯಬಳಿ ಇರಬಹುದೆಂದುಕೊಂಡು ರಾಜು ಅಲ್ಲಿಗೆ ಹೊದ.ಅವನ ಯೋಚನೆ ಸರಿಯಾಗಿತ್ತು. ರಫೀಕ ತೊರೆಗೆ ಪಕ್ಕದಲ್ಲಿ ಕಲ್ಲುಗಳನ್ನು ಜೊಡಿಸಿ ಒಲೆ ಮಾಡಿ ಅದರ ಮೇಲೆ ಒಂದು ಮಡಕೆ ಇಟ್ಟು ಅಡುಗೆ ಮಾಡುವ ತಯಾರಿ ನಡೆಸಿದ್ದ.ಅದನ್ನು ಗಮನಿಸಿದ ರಾಜು ಅವನ ಬಳಿಗೆ ಬಂದು ಆಶ್ಚರ್ಯದಿಂದ ಕೆಳಿದ,

"ರಫೀಕ, ಇದೆನು ಮಾಡಾಖತ್ತಿ ಗೆಳೆಯಾ? ಮೀನು ಸಾರು ಮಾಡುತಿದ್ದೆನಪ್ಪಾ. " ರಾಜುವಿಗೆ ಆಶ್ಚರ್ಯ

"ಅರೇ,ಪಾತ್ರೆಯೊಳಗೆ ಎನೂ ಇಲ್ಲ ,ಮೀನೆಲ್ಲಿ ? ಎಂದು ನಕ್ಕ ಸ್ವಲ್ಪ ತಾಳು ಮೀನು ತಾವಾಗಿ ಬಂದು ಮಡಿಕೆಯೋಳಗೆ ಬಿಳುತ್ತವೆ ."

" ಹೇಯ್ ಹುಚ್ಚ. ನಿನ್ನ ತಲೆ ಕೆಟ್ಟದ ಏನು? ಮೀನು ಖಾಲಿ ಮಡಿಕೆಯೋಳಗೆ ಬಿದ್ದು ನಿನಗೆ ತಿನ್ನಲು ಸಿಗತಾವಾ?

ತಮಾಶೆ ಮಾಡುತ್ತಿದ್ದಿಯಾ ? ಯಾಕೆ ನನ್ನ ಮಾತಿನಲ್ಲಿ ನಂಬಿಕೆ ಇಲ್ಲಾ ನಿನಗ? ನಿನಗೆ ಹುಚ್ಚು ಹಿಡಿದದ ಏನು ನನ್ನ ಬುದ್ಧಿ ಕೆಟ್ಟಿಲ್ಲಪ್ಪ ಎನೂ ಹೇಳಾಖತ್ತಿಯೋ ದೊಸ್ತಾ ........ ನನಗೆ ಹುಚ್ಚು......ಪಾಪ ನೀನಗೆ ಎನೂ ಗೋತ್ತು. ಒಲಿಮ್ಯಾಲ ಇಟ್ಟಿರುವ ಪಾತ್ರೆಯೋಳಗೆ ಮೀನು ತಾನಾಗಿ ಬಂದು ಬೀಳತಾವ ಎಂಬುದಕ್ಕೆ ಇಗಾಗಲೆ ಸೂಚನೆ ನಿಕ್ಕದೋ ಬೆಪ್ಪ...ಎನೂ ಸೂಚನೆ....ಸಿಕ್ಕದಾ.....ಏನದು ಸೂಚನೆ ಯಾವಾಗ ದೋರೆಯಿತು ? ರಾಜು ಆಶ್ಚರ್ಯದಿಂದ ಕೇಳಿದ .

"ನೀನು ಹಕ್ಕಿ ಹಿಡಿಯಲೆಂದು ಬಲೆ ಹಾಕಿದು ನಿಜತಾನೆ ? ಹೌದು ನಿನ್ನ ಬಲೆ ಚಿಕ್ಕದು ...."

"ಹಾಗಾದರೆ ಹಕ್ಕಿ ಬಲೆಯೋಳಗೆ ಜಿಂಕೆ ಕೂಡಾ ಸಿಕ್ಕಿಹಾಕಿಕೋಳ್ಳುವುದು ನಿಜವಾದರೆ ಈ ಕಾಡಿನಲ್ಲಿ ಒಲೆಯಮೇಲಿಟ್ಟಿರುವ ಖಾಲಿ ಮಡಿಕೆಯೋಳಗೆ ಮೀನು ತಾನಾಗಿ ಬಂದು ಸೇರಿ ಕೊಳ್ಳುವ ಸಾದ್ಯತೆ ಇದೆತಾನೆ ಎಂದ ರಫೀಕ ?

ರಾಜುವಿಗೆ ಮಾತು ಹೊರಡಲಿಲ್ಲ. ತನ್ನ ತಪ್ಪಿನ ಅರಿವಾಯಿತು. ಛೆ...... ಎಂಥಾ ತಪ್ಪ ಮಾಡಿಬಿಟ್ಟೆ ನಾನು ಎಂದು ತುಂಬಾ ಬೇಜಾರಾದ ಮೊದಲು ತಾನು ಮಾಡಿದ್ದು ಜಾಣತನವೆಂದು ಹೆಮ್ಮೆಪಟ್ಟಿದ್ದ ರಾಜು ಪೆಚ್ಚಾಗಿ ಗೆಳೆಯನ ಮುಖ ನೋಡಿ ಕ್ಷಮಿಸು ಎಂದು ಬೇಡಿದ .

ಮಾಡಿದ ತಪ್ಪಿನ ಅರಿವಾಗಿ ಕ್ಷಮೆ ಬೇಡುತ್ತಿರುವ ಗೆಳೆಯನನ್ನು ತಪ್ಪನ್ನು ಅರಿತುಕೊಂಡ ಗೆಳೆಯನನ್ನು ತಬ್ಬಿಕೊಂಡು ರಫೀಕ ಸಂತೋಷಪಟ್ಟ ಮುಂದೆ ಎಂದು ಈ ರೀತಿಯ ತಪ್ಪು ಮಾಡೋದಿಲ್ಲ ಗೆಳೆಯಾ ನನ್ನ ತಪ್ಪಿನ ಅರಿವು ನನಗಾಗಿದೆ ಎಂದ ರಾಜು ಜಿಂಕೆಯನ್ನು ಮನೆಗೆ ತೆಗೆದುಕೊಂಡು ಹೋಗಿ ತಾಯಿಯ ಹತ್ತಿ ಒಳ್ಳೆ ಅಡುಗೆ ಮಾಡಿಸಿ ತಿಂದು ಸಂತೋಷ ಪಟ್ಟರು ಮುಂದೆ ಇವರು ದೊಡ್ಡವಗರಾಗಿ ಒಳ್ಳೆಯ ಗೆಳೆಯರಾಗಿ ಸಮಾಜದಲ್ಲಿ ಉತ್ತಮ ಗೆಳೆತನದ ಸಾರವನ್ನು ಬಿತ್ತಿದರು. ಗೆಳೆಯರೆಂದರೆ ಹಿಗಿರಬೇಕಪ್ಪಾ ಎಂದು ಜನಸಾಮಾನ್ಯರು ಮಾತನಾಡುವ ಹಾಗೆ ಜಿವಿಸಿದರು. ಆ ಹಿಂದೆ ಮಾಡಿದ ತಪ್ಪು ಅವರ ಅಜರಾಮರ ಬಾಲ್ಯದ ಗೆಳೆತನಕ್ಕೆ ದಾರಿದೀಪವಾಯಿತು. ಜೀವನದಲ್ಲಿ ತಪ್ಪುಗಳು ಆಗುವವು ನಿಜ ಆದರೆ ಆತಪ್ಪುಗಳು ಮರಳಿ ಆಗದಂತೆ ನೋಡಿಕೊಂಡು ಬದುಕುವುದೆ ಮನುಷ್ಯತ್ವ.

# ಅದೇನೋ ಬಾಲ್ಯದ ಬಗ್ಗೆ ಬರಿಬೇಕಂತೆ !!

–ಸ್ವಾತಿ ಸುಬ್ರಹ್ಮಣ್ಯ

ನನಗೆ ಹೆಚ್ಚೇನೂ ನೆನಪಿಲ್ಲ
ತುಂಡಾದ ಕಡ್ಡಿ ಬಳಪದ ರುಚಿ
ಒಂದಷ್ಟು ಕನಸುಗಳ ರಾತ್ರಿ
ಬಿಗಿದಪ್ಪಿ ಗೋಗರೆದ ತೋಳು
ಕರುಣೆಯಿಂದ ಮಿಡಿದ ಹೃದಯ ಇವಿಷ್ಟೇ..

ನನಗೆ ಹೆಚ್ಚೇನೂ ನೆನಪಿಲ್ಲ
ಹರಿದ ನಿಲುವಂಗಿಯ ರಾಜು
ರಿಬ್ಬನ್ ಕೂದಲಿನ ರೇಖ
ಕೆಂಗಣ್ಣು ಹುಸಿಗೋಪದ ಮೇಷ್ಟ್ರು
ಇವರೆಲ್ಲರ ಮಧ್ಯೆಯೇ ನನ್ನ ಅಸ್ತಿತ್ವ ಇವಿಷ್ಟೇ..

ನನಗೆ ಹೆಚ್ಚೇನೂ ನೆನಪಿಲ್ಲ
ಮೈದಾನದಿ ಆದ ಪೆಟ್ಟು
ಮನೆಯೊಳಗಣ ಒಲೆಯ ಶಾಖ
ಬಿದ್ದು ಒದ್ದಾಡಿದ ಕೆಸರು
ಜನ ಜಂಗುಳಿಯ ಮಧ್ಯೆ ಕಳೆದು ಹೋದ ಪ್ರಜ್ಞೆ ಇವಿಷ್ಟೇ..

ನನಗೆ ಹೆಚ್ಚೇನೂ ನೆನಪಿಲ್ಲ
ಪುಟದ ಮರೆಯಲ್ಲಿ ಇಣುಕುತಿದ್ದ ನವಿಲುಗರಿ
ಬಾನಂಗಳದ ಕಥೆಯ ಅನಾವರಣ
ಚಂದಮಾಮ ಕಥೆಯ ರಾಜಕುಮಾರ
ಆತ್ಮಕಥನ ಬರೆಯ ಹೊರಟ ಲೇಖನಿ ಇವಿಷ್ಟೇ..

ನನಗೆ ಹೆಚ್ಚೇನೂ ನೆನಪಿಲ್ಲ
ನನ್ನ ಬಾಲ್ಯದ ನೆನಪುಗಳು ಇವಿಷ್ಟೇ..



# □ □ದು ಕಥೆ:

-Sudarshan K.

□□ದೂರಲ್ಲಿ □ಬ್ಬ ಬೇಟೆಗಾರ ಇದ್ದ. ಅವನು ಕಾಡಿಗೆ ಬೇಟೆಗಾಗಿ ಹೋದ. ಅವನಿಗೆ ಹಸಿವಾಗೋಕೆ ಶುರುವಾಯಿತು ಎಷ್ಟೊತ್ತಾದ್ರೂ ಅವನಿಗೆ □□ದು ಬೇಟೆನೂ ಸಿಗಲಿಲ್ಲ. ಹೋಗ್ಲಿ ಹಣ್ಣು-ಹಂಪಲಾದ್ರು ತಿನ್ನಣಾ ಅಂದ್ರೆ ಅದೂ ಸಿಗಲಿಲ್ಲಾ. ಜೊತೆಗೆ ದಾರಿನೂ ತಪ್ಪಿಬಿಟ್ಟ, ಎಲ್ಲೂ ಅವನು ಮನೆಗೋಗೊ ದಾರಿ ಕಾಣುಸ್ತಿಲ್ಲಾ.


ಇದು ಈಗಿನ ಕಥೆ ಅಲ್ಲಾ ಅವಾಗ ಹಳೇ ಕಾಲದ್ದು ಈಗಾದ್ರೆ ಮೊಬೈಲ್ ಇದೆ ಪೋನ್ ಮಾಡಿ ಕೇಳ್ಕೊಂಡೋ, ಜಿಪಿಎಸ್ ಆನ್ ಮಾಡಿ ದಾರಿ ನೋಡ್ಕೊಂಡೋ ಮನೆ ಸೇರ್ಕೊಬೋದಿತ್ತು. ಈಗ ಅವನ್ ಪರಿಸ್ಥಿತಿ ಏನು ತುಂಬಾ ಸುತ್ತಿ ದಣಿವಾಯಿತು. ಬಾ□ಯಾರಿಕೆ ಅಂತೂ ತುಂಬಾ ಆಗೋಕೆ ಶುರುವಾಯಿತು. ಅವನು ಹಾಗೆ ನಡ್ಕೋತಾ ಹೋಗಿ ್ತದ್ದಾಗ ಅವನಿಗೆ ಕಾಡು ದಾಟಿ ಒಂದು ಮರುಭೂಮಿ ಸಿಕ್ತು. ಮರುಭೂಮಿ ಅಂದರೆ ಗೊತ್ತಲ್ವ ಬರೀ ಮರಳಿರತ್ತೆ, ಬಿಸಿಲು ಬೇರೆ ಇವನಿಗೆ ಸಾಕಾಗಿ ಹೋಯಿತು, ಅದೇ ಟೈಮ್‌ಗೆ ಸರಿ□ಯಾಗಿ ಅವನಿಗೆ ದೂರದಲ್ಲಿ □□ದು ಗುಡಿಸಲು ಕಾಣ್ತು. ಅಲ್ಲಿ ಒಂದು ಒಂಟೆನೂ ಕಟ್ಟಿದ್ರು. ಇವನು ಕಷ್ಟಪಟ್ಕೊಂಡು ಅಲ್ಲಿಗೆ ಹೋದ. ನೋಡುದ್ರೆ ಅಲ್ಲಿ ಯಾರು ಇಲ್ಲಾ. ಇವನಿಗೆ ಮೊದಲೇ ಬಾಯಾರಿಕೆ, ಆಯಾಸ ಆಗಿ ಜೀವ ಹೋಗೊಹಾಗಾಗಿತ್ತು. ಆ ಗುಡಿಸಲು ಕಟ್ಟೆಮೇಲೆ ಕೂತ, ಆ ಕಟ್ಟೆ ಮೇಲೆ ಒಂದು ಚೀಟಿ ಇತ್ತು, ಅದ್ರು ಮೇಲೆ ಒಂದು ಸಣ್ಣ ಲೋಟ,ಆ ಲೋಟದ ಕಾಲುಭಾಗದಷ್ಟು ನೀರಿತ್ತು. ಇವನಿಗೆ ಅಷ್ಟು ನೀರನ್ನು ನೋಡಿ ತುಂಬಾ ಖುಷಿಯಾಯ್ತು.ಅದನ್ನ ತಗೊಂಡು ಕುಡಿಯೋಣಾ ಅಂತ ಹೋಗೋಷ್ಟರಲ್ಲಿ ಆ ಚೀಟಿನಾ ಓದಿಬಿಡೋಣಾ ಏನಿದ್ಯೋ ಈ ನೀರಿನಬಗ್ಗೆ ಅಂತಾ ಅದನ್ನಾ ತೆಗೆದು □ದಿದ.

ಅದರಲ್ಲಿ ಬರೆದಿತ್ತು, ಈ ಗುಡಿಸಲಿನ ಪಕ್ಕದಲ್ಲಿ ಒಂದು ಹಳೇ ಬೋರ್ವೆಲ್ ಇದೆ. ಈ ಲೋಟದಲ್ಲಿರೋ ನೀರನ್ನಾ ಅದರ ಪೈಪ್ ಒಳಗೆ ಹಾಕಿ ಬೋರ್‌ವೆಲ್ ಹೋಡುದ್ರೆ ತುಂಬಾ ನೀರು ಬರುತ್ತೆ, ಅದನ್ನಾ ಕುಡಿದು ನಿಮ್ ಆಯಾಸಾನಾ ನೀಗಿಸಿಕೊಳ್ಳೀ ಅಂತಾ ಇತ್ತು. ಇವನಿಗೆ ಅದನ್ನಾ ಓದಿ ತಲೆಕೆಡ್ತು.ಅರೆ ಇರೋದಿಷ್ಟೇ ನೀರು ಇದನ್ನಾ ಅಲ್ಲಿ ಹಾಕಿ ಆಮೇಲೆ ನೀರೇನೂ ಬರದಿದ್ದರೆ? ನನ್ ಕತೆಯೇನು? ಯೋಚ್ಸಿದ. ನೀವಾಗಿದ್ರೆ ಏನ್ ಮಾಡ್ತಿದ್ರಿ? □ಯಾವೋನು ಕೈಗೆ ಸಿಕ್ಕಿರೋ ಅಮೃತಾನಾ ಬಿಡ್ತಾನೆ, ಅಷ್ಟೆ ಸಾಕಂತ ಕುಡಿತಿದ್ರೇನೋ ಅಲ್ವಾ…

ಈಗ ಬೇಡನಿಗೆ ಗೊಂದಲ ಅಯ್ತು. ಈಗ ಅಲ್ಯಾರು ಇಲ್ಲ ಕೇಳೋಕೆ, ಆ ಚೀಟಿಲೀ ಬರ್ದಿರೋದುನ್ನಾ ಹೇಗೆ ನಂಬೋಕಾಗತ್ತೆ. ಮೊದಲೇ ಅವನಿಗೆ ಬಳಲಿಕೆ, ಬಾಯಾರಿಕೆ ಇಂದ ಕಂಗೆಟ್ಟು ಹೋಗಿದನೆ. ಆಗಿದ್ದಾಗಲೀ ಅಂತಾ ಅದನ್ನಾ ಆ ಬೋರ್ವೆಲ್ ಪೈಪ್ ಒಳಗೆ ಹಾಕೋಕೆ ತೀರ್ಮಾನಿಸಿ, ಹೋಗಿ ಅದರೊಳಗೆ ಆ ಸ್ವಲ್ಪ ನೀರನ್ನಾ ಹಾಕಿ ಬೋರ್ವೆಲ್ ಜಗ್ಗಿದ ಎರಡು ಮೂರು ಬಾರಿ ಹೋಡಿಯೋ ಅಷ್ಟರಲ್ಲಿ ತುಂಬಾ ನೀರು ಸುರಿಯೋಕ್ ಪ್ರಾರಂಭ ಆಯ್ತು. ಹೋ ಇವನಿಗೆ ಖುಷಿ ಆಗೋ□ಯ್ತು. ಹೊಟ್ಟೆ ತುಂಬಾ ನೀರು ಕುಡಿದು ಅದರ ಪಕ್ಕಕ್ಕೆ ಬಂದು ನಿಂತ. ಅಲ್ಲೋಂದು ಚೀಟಿ ಇತ್ತು. ಅವನಿಗೆ ಆಶ್ಚರ್ಯ ಅರೆ ಇಲ್ಲೋಂದ್ ಚೀಟಿ ಇದ್ಯಲ್ಲಾ ಅಂತ ತೆಗೆದು □ದಿದ.

 ಆ ಚೀಟಿಯಲ್ಲಿ  ನೀರು ಜೀವಜಲ ಅದನ್ನಾ ಪೋಲು ಮಾಡಬೇಡಿ, ಈಗ ತಕ್ಷಣ ಆ ಲೋಟದಲ್ಲಿ ನೀರನ್ನಾ ತುಂಬಿ ಅಕಸ್ಮಾತ್ ಅದು ಖಾಲಿಯಾದರೆ ಈ ಬೋರ್ ಲೀ ನೀರ್ ಬರೋಲ್ಲಾ  ಅಂತ ಇತ್ತು. ಅವನು ತಕ್ಷಣ ಲೋಟಾನಾ ಅದರ ಕೆಳಗೆ ಇಟ್ಟ ಅದರಲ್ಲಿ ಮತ್ತೆ ಕಾಲುಭಾಗದಷ್ಟೇ ನೀರು ತುಂಬಿತು. ಅದನ್ನಾ ನೋಡಿ ಇವನಿಗೆ ಹೌದು ನೀರೆಷ್ಟು ಮುಖ್ಯ ನಮಗೆ ಅನ್ನುಸ್ತು. ಇಷ್ಟು ನೀರು ಇರಲಿಲ್ಲ ಅಂದ್ರೆ ನನಗೆ ಸಾವೇ ಗತಿ ಆಗ್ತಿತ್ತು, ನೀರನ್ನಾ ಸರಿಯಾಗಿ ಬಳುಸ್ಬೇಕು, ಉಳುಸ್ಬೇಕು ಅನ್ಕೋಂಡ. ಆ ಚೀಟಿಯಲ್ಲಿ ಮತ್ತೆ ಕೆಳಗೆ ಬರ್ದಿತ್ತು ಈ ಒಂಟೆ ಮೇಲೆ ಹತ್ತಿ,ಅದು ನಿಮ್ಮನ್ನ ಊರ ದಾರಿಗೆ ಬಿಟ್ಟು ಬರತ್ತೆ ಅಂತಾ. ಅದನ್ನ ಹತ್ತಿ ಕೂತ. ಅದು ಅವನ ಊರ ದಾರಿಗೆ ಸೇರಿಸಿ ವಾಪಾಸ್ಸು ಹೋಯಿತು. ಹೀಗೆ ಅವನು ತನ್ನ ಮನೆ ಸೇರಿದ.

( ಶಿಕ್ಷಕರೊಬ್ಬರು ಪಾಠದ ಸಮಯದಲ್ಲಿ ಮಕ್ಕಳಿಗೆ ಹೇಳಿದ ಕಥೆ- ಈಗ ಮಕ್ಕಳ ದಿನಾಚರಣೆಗಾಗಿ)







Azim Premji Foundation

Please Contact Bayalu Team

| Sl. No. | Name | Mail id |
|---|---|---|
| 1 | Raghavendra Herle G. | raghavendra.herle@azimpremjifoundation.org |
| 2 | Showrish Kudkuli | showrish.kudkuli@azimpremjifoundation.org |
| 3 | Benny Mathews | benny.mathews@azimpremjifoundation.org |
| 4 | Chikkaveeresha S. V. | chikkaveeresha.v@azimpremjifoundation.org |
| 5 | Lakshmidevi | lakshmidevi@azimpremjifoundation.org |
| 6 | Gopalakrishna Induguli | gopalakrishna@azimpremjifoundation.org |
| 7 | Yathiraj Sharma | yathiraj.sharma@azimpremjifoundation.org |
| 8 | Naganand GV | nagananda.gv@azimpremjifoundation.org |
| 9 | Ravi B T | ravi@azimpremjifoundation.org |
| 10 | Niranjan Sravade | niranjan.sarvade@azimpremjifoundation.org |
| 11 | Sudharshan K | sudharshan.k@azimpremjifoundation.org |
| 12 | Shivaji | shivaji.ganpatrao@azimpremjifoundation.org |
| 13 | Lohit | lohitashwa.chamanoor@azimpremjifoundation.org |
| 14 | Giridhar Vaidya | giridhara.vaidya@azimpremjifoundation.org |
| 15 | Muzamimml | muzammil.mahaldar@azimpremjifoundation.org |
| 16 | Shivukumar | shivukumar@azimpremjifoundation.org |
| 17 | Gangadhar.Swamy | gangadhar.swamy@azimpremjifoundation.org |
| 18 | Pradeep Kumar | pradeep.kumar@azimpremjifoundation.org |
| 19 | Swathi Subramanya | swathi.subramanya@azimpremjifoundation.org |
| 20 | Shivakumara Swamy | shivakumara.swamy@azimpremjifoundation.org |
| 21 | Gundappa Katekar | gundappa.katekar@azimpremjifoundation.org |